# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ನವೆಂಬರ್ 10, 2021

ಸಂಪುಟ : 48 ಸಂಚಿಕೆ : 179 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com





# ತುಮ್ಮಿನಕಟ್ಟೆಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ರಾಣೇಬೆನ್ನೂರು, ನ.9- ಸರ್ಕಾರದಿಂದ ಹಣ ಬಿಡುಗಡೆ ಆಗಿಲ್ಲ. ಆದರೂ ಸಹಿತ ನಿಮ್ಮಿಂದ ಸನ್ಮಾನ ಸ್ವೀಕರಿಸಿದಾಗ ಕೊಟ್ಟ ಮಾತು ಉಳಿಸಿಕೊಳ್ಳಲು ಸ್ನೇಹಿತರಿಗೆ ಹೇಳಿ ಕೆಲಸ ಮಾಡಿಸುತ್ತಿದ್ದೇನೆ. ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದರೆ ಹಣ ಬಂದೇ ಬರುತ್ತದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ತಾಲ್ಲೂಕಿನ ತುಮ್ಮಿನಕಟ್ಟೆ ಗ್ರಾಮದಲ್ಲಿ 6.75 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಸ್ತ್ರೀ ಶಕ್ತಿ ಬಳಗದ ಸಂಘಗಳಿಗೆ ಸಬ್ಸಿಡಿ ಚೆಕ್ ವಿತರಣೆ ಮಾಡಿ ಅವರು ಮಾತನಾಡಿದರು.

ಆರ್‌ಸಿಸಿ ಗಟಾರ, ರಸ್ತೆ, ಶಾದಿ ಮಹಲ್, ಶಾಲಾ ಕಟ್ಟಡ ಮುಂತಾದ ಕಾಮಗಾರಿಗಳ ಒಟ್ಟು ಹಣದಲ್ಲಿ ಕೇವಲ 75 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ಎಲ್ಲ ಕಾಮಗಾರಿಗಳು ಆರು ತಿಂಗಳೊಳಗೆ ಮುಗಿಯಲಿವೆ. ಅಲ್ಪ ಸಂಖ್ಯಾತರ ಶಾದಿಮಹಲ್ ಹಾಗೂ ಸರ್ಕಾರಿ ಪ್ರಾಥಮಿಕ



ಶಾಲಾ ಕಟ್ಟಡ ಒಂದು ವರ್ಷದೊಳಗೆ ಮುಗಿಯಲಿದೆ ಎಂದು ಶಾಸಕರು ಹೇಳಿದರು.

ಗ್ರಾಮದ ಬೇಡಿಕೆಗಳಾದ ಗ್ರಾಮ ಠಾಣಾ ಹದ್ದು ವಿಸ್ತರಿಸುವ, ಬಡವರೇ ಹೆಚ್ಚಿರುವ ಈ ಭಾಗದ ಯುವಕರಿಗೆ ಉದ್ಯೋಗ ಸೃಷ್ಟಿಸಲು ಕೈಗಾರಿಕೆ ತರುವುದರ ಜೊತೆಗೆ ಹೆಣ್ಣುಮಕ್ಕಳಿಗೆ ಗಾರ್ಮೆಂಟ್ ಅನ್ನು ತಾವೇ ಸ್ವತಃ ಪ್ರಾರಂಭಿಸುವುದಾಗಿ ಶಾಸಕರು ಭರವಸೆ ನೀಡಿದರು. ಇದುವರೆಗೂ ಆಡಿದ ಮಾತುಗಳನ್ನು ಉಳಿಸಿಕೊಂಡಿದ್ದು, ಇನ್ನು ಮುಂದೆಯೂ ಅದರಂತೆ ನಡೆಯುತ್ತೇನೆ ಎಂದು ಪೂಜಾರ ಹೇಳಿದರು.

ಶಾಸಕರ ಪತ್ನಿ ಮಂಗಳಗೌರಿ ಪೂಜಾರ, ಗ್ರಾ.ಪಂ. ಅಧ್ಯಕ್ಷರಾದ ಜ್ಯೋತಿ ಉಪ್ಪಿನ, ಉಪಾಧ್ಯಕ್ಷೆ ರತ್ನವ್ವ ಮಾರ್ಗಣ್ಣನವರ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಬಿಜೆಪಿ ಗ್ರಾಮೀಣ ಅಧ್ಯಕ್ಷ ಬಸವರಾಜ ಕೇಲಗಾರ, ಮುಖಂಡ ಮಂಜಯ್ಯ ಚಾವಡಿ, ನಾರಾಯಣ ದುರಗೆರೆ, ಅಂಬಿಕಾ ಶೇಷಗಿರಿ, ಮಂಜಣ್ಣ ಗಂಜಾಮದ, ಯಶೋಧ ಗಂಜಾಮದ ಇನ್ನಿತರರಿದ್ದರು.

### ಡಿ.9 ಅದ್ಧೂರಿ ಸಮಾರಂಭ

ಡಿಸೆಂಬರ್ 9 ರಂದು 11 ಸಾವಿರ ಮಹಿಳೆಯರಿಗೆ ಸಮವಸ್ತ್ರದ ಸೀರೆಗಳು ಹಾಗೂ 11 ಮಹಿಳೆಯರಿಗೆ ಸ್ತ್ರೀ ಶಕ್ತಿ ಸಬ್ಸಿಡಿ ಚೆಕ್ ವಿತರಿಸಲಾಗುವುದು. ಈಗ ಮಾತು ಕೊಟ್ಟಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರೈಸಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ನನ್ನ ಶಾಸಕತ್ವದ ಅವಧಿಯ ಎರಡನೇ ವಾರ್ಷಿಕೋತ್ಸವವನ್ನು ಅದ್ಧೂರಿಯಾಗಿ ಆಚರಿಸುತ್ತೇನೆ ಎಂದು ಶಾಸಕ ಅರುಣ ಕುಮಾರ ಪೂಜಾರ್ ವಿಶ್ವಾಸ ವ್ಯಕ್ತಪಡಿಸಿದರು.

## ಪುನೀತ್ ಪುಣ್ಯತಿಥಿ : ಅಣಜಿಯಲ್ಲಿ ಅನ್ನ ಸಂತರ್ಪಣೆ

ದಾವಣಗೆರೆ, ನ.9- ನಟ ಪುನೀತ್ ಪುಣ್ಯತಿಥಿ ನಿಮಿತ್ತ ತಾಲ್ಲೂಕಿನ ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಅಣಜಿ ಗ್ರಾಮದಲ್ಲಿ ನಿನ್ನೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.



ಈ ಸಂದರ್ಭದಲ್ಲಿ ಆನಗೋಡು ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ಮಾತನಾಡಿ, ಪುನೀತ್ ಅವರ ಸಾಮಾಜಿಕ ಸೇವಾ ಕಾರ್ಯಗಳ ಕುರಿತು ವಿವರಿಸಿ, ಬದುಕಿರುವಾಗಲೇ ಸಮಾಜಕ್ಕೆ ಒಳಿತಾಗುವಂತಹ ಸೇವಾ ಕಾರ್ಯಗಳನ್ನು ಮಾಡಿ, ಪುನೀತ್‌ರಂತೆ ಬದುಕಿ ಬಾಳಿ ಎಂದು ಕರೆ ನೀಡಿದರು.

ಎಪಿಎಂಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್ ಮಾತನಾಡಿ, ಪುನೀತ್ ಕಣ್ಣುಗಳನ್ನು ದಾನ ಮಾಡುವ ಮೂಲಕ ಈಗಿನ ಯುವ ಪೀಳಿಗೆಗೆ ನೇತ್ರದಾನದ ಮಹತ್ವ ಸಾರಿ ಹೋಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅಣಜಿ ಗ್ರಾಮದ ಮುಖಂಡರಾದ ರಾಜಪ್ಪ, ಚನ್ನಪ್ಪ, ಮಿಲ್ಟ್ರಿ ಅಂಜಿನಪ್ಪ, ಮಂಜುನಾಥ್, ಮಲ್ಲಿಕಾರ್ಜುನ್, ಗ್ರಾ.ಪಂ. ಸದಸ್ಯ ಹನುಮಂತಪ್ಪ, ಸಂತೋಷ್, ನಾಗರಾಜ್, ರೇವಣಸಿದ್ದಪ್ಪ, ಅಂಜಿನಪ್ಪ, ಮಾಸ್ಟರ್ ಹನುಮಂತಪ್ಪ, ಕರಿಬಸಪ್ಪ ಮತ್ತು ಇತರರು ಭಾಗವಹಿಸಿದ್ದರು.

## ಹೊನ್ನಾಳಿ : ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದ ಉದ್ಘಾಟನೆ

ಹೊನ್ನಾಳಿ, ನ.9- ತಾಲ್ಲೂಕಿನ ಉಜ್ಜನೀಪುರದಲ್ಲಿ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದ ಉದ್ಘಾಟನೆಯು ನಾಡಿದ್ದು ದಿನಾಂಕ 11 ಹಾಗು 12 ರಂದು ನಡೆಯಲಿದ್ದು, ಶುಕ್ರವಾರ 11 ಗಂಟೆಗೆ ಧರ್ಮ ಸಭೆ ನಡೆಯಲಿದೆ.

### ಅಪ್ಪು ನೀ ಹುಟ್ಟಿ ಬಾ

ಅಪ್ಪು ನೀನೇಕೆ ಬೇಗ ಸಾವನ್ನಪ್ಪಿದೆ,
ಸಾವಿರ ಅಭಿಮಾನಿಗಳ ತೊರೆದು
ಸ್ವರ್ಗಸ್ಥ ಅಪ್ಪ -ಅಮ್ಮನ ನೋಡಲು
ಬೇಗನೆ ಈ ಜಗದ ಸಂತೆಯ ಮುಗಿಸಿದೆ

ನಿನ್ನನೇ ನಂಬಿದ ಸಹಸ್ರಾರು ಜನರ
ಕಣ್ಮಣಿಯಾಗಿದ್ದ ನೀನು ಎಲ್ಲರ ಕಣ್ಣೀರು
ತರಿಸುತ್ತಿರುವೆ, ಜಗದ ಎದುರು ನೀ
ಕಣ್ಮರೆಯಾದರೂ ನೀ ಮಾಡಿದ ಸೇವೆ
ಎಲ್ಲರ ಕಣ್ಣು ತೆರೆಸುತ್ತಿದೆ

ಮರಣದ ನಂತರ ನಾಲ್ಕು ಜನ ಅಂಧರ
ಬಾಳಿಗೆ ಬೆಳಕಾದೆ, ನಿನ್ನೀ ಗುಣವೇ
ಇಂದು ನೇತ್ರ ದಾನ ಮಾಡಲು
ಸಹಸ್ರಾರು ಜನಕೆ ಪ್ರೇರಣೆ ನೀ ಆದೆ

ಅಪ್ಪು ನೀ ಜಗತ್ ಒಪ್ಪುವಂತೆ ಬಾಳಿದೆ
ಎಲ್ಲರ ಮನದಲ್ಲಿ ಚಿರಸ್ಥಾಯಿಯಾದೆ
ಅಪ್ಪನಂತೆ ಮಗ ಎಂಬುದನ್ನು ಸಾಬೀತು
ಮಾಡಿದೆ, ನೀ ಮತ್ತೊಮ್ಮೆ ಹುಟ್ಟಿ ಬಾ
ಎಂಬುದೇ ಎಲ್ಲರ ಕೋರಿಕೆ

- ಡಾ. ಸಿ. ಕೆ. ಆನಂದತೀರ್ಥಾಚಾರ್

## ವಾಹನ ಅಡ್ಡಗಟ್ಟಿ ದರೋಡೆಗೆ ಹೊಂಚು: ನಾಲ್ವರ ಬಂಧನ

ಹರಪನಹಳ್ಳಿ, ನ.9- ವಾಹನಗಳನ್ನು ಅಡ್ಡಗಟ್ಟಿ ದರೋಡೆ ಮಾಡಲು ಹೊಂಚು ಹಾಕಿದ್ದ ನಾಲ್ವರು ದರೋಡೆಕೋರರನ್ನು ತಾಲ್ಲೂಕಿನ ಅಲಗಿಲವಾಡ ಕ್ರಾಸ್ ಬಳಿ ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ತನಿಖೆ ಕೈಗೊಂಡ ನಂತರ ಅವರಿಂದ 10 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶ ಪಡಿಸಿಕೊಂಡಿದ್ದಾರೆ.

ಇಂದ್ರ ಮೋಡಿಕಾರ ಅಲಿಯಾಸ್ ದುರುಗಪ್ಪ, ಚನ್ನದಾಸರ ಭೀಮ ಅಲಿಯಾಸ್ ಭೀಮೇಶ, ಚಂದ್ರಪ್ಪ ಅಲಿಯಾಸ್ ಕುಲ್ಡ ಹಾಗೂ ರಮೇಶ ಬಂಧಿತ ದರೋಡೆಕೋರರು. ಎಲ್ಲಾ ಆರೋಪಿತರು ಹಗರಿ ಬೊಮ್ಮನಹಳ್ಳಿ ಪಟ್ಟಣದ ಕುರದಗಡ್ಡಿಯವರು. ಇವರ ಜೊತೆಗೆ ಸಂಶಯಾಸ್ಪದ ವ್ಯಕ್ತಿ ಮೋರಿಗೇರಿ ಮೋಡಿಕಾರ ನಾಗರಾಜ ಸೇರಿದಂತೆ, ಒಟ್ಟು 5 ಜನರನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿ, ಪುನಃ ವಿಚಾರಣೆಗೆ ಪೊಲೀಸರ ವಶಕ್ಕೆ ಪಡೆದು



ವಿಚಾರಣೆ ನಡೆಸಲಾಯಿತು.

**ಹರಪನಹಳ್ಳಿ**

ಇದೇ ತಂಡ ಈ ಹಿಂದೆ ಹರಪನಹಳ್ಳಿ ಪಟ್ಟಣದ ಹೊಸ ಕೆಎಚ್‌ಬಿ ಕಾಲೋನಿಯಲ್ಲಿ, ಪಾರ್ಕ್ ಬಳಿ ಮತ್ತು ಕೂಲಹಳ್ಳಿ ಗ್ರಾಮದಲ್ಲಿ ಮನೆ ಕಳ್ಳತನ, ಹರಪನಹಳ್ಳಿ ಪಟ್ಟಣದ ಕಾಳಿಕಾ ದೇವಸ್ಥಾನದ ಹುಂಡಿ, ಕೂಡ್ಲಿಗಿ ತಾಲ್ಲೂಕು ಹೊಸಕೆರೆ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದ ಹುಂಡಿ, ಗುಂಡಗತ್ತಿ ಮತ್ತು ಇಟ್ಟಿಗಿ ಗ್ರಾಮದ ವೈನ್‌ಶಾಪ್ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾರೆ. ಇವರ ವಿರುದ್ಧ ಹರಪನಹಳ್ಳಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ನಾಲ್ಕು ದೂರುಗಳು, ಹಲುವಾಗಲು ಠಾಣೆಯಲ್ಲಿ, ಹಡಗಲಿ ತಾಲ್ಲೂಕಿನ ಇಟಗಿ ಠಾಣೆಯಲ್ಲಿ ಹಾಗೂ ಕೂಡ್ಲಿಗಿ ಠಾಣೆಯಲ್ಲಿ ದೂರುಗಳು ದಾಖಲಾಗಿವೆ.

ಪೊಲೀಸರು ಸಮಗ್ರ ವಿಚಾರಣೆ ಕೈಗೊಂಡಾಗ 145 ಗ್ರಾಂ ಬಂಗಾರದ ಆಭರಣಗಳು, 1 ಕಿಲೋ 500 ಗ್ರಾಂ ಬೆಳ್ಳಿ ಆಭರಣಗಳು, 76 ಸಾವಿರ ನಗದು, ಕಳ್ಳತನ ಮಾಡಿದ 4 ಮೋಟಾರ್ ಸೈಕಲ್‌ಗಳು ಸೇರಿದಂತೆ ಒಟ್ಟು 10,50,000 ಸಾವಿರ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಪ್ರಕರಣವನ್ನು ಡಿವೈಎಸ್ಪಿ ಹಾಲಮೂರ್ತಿರಾವ್ ಮಾರ್ಗದರ್ಶನದಲ್ಲಿ, ತನಿಖಾಧಿಕಾರಿ ವೃತ್ತ ನಿರೀಕ್ಷಕ ನಾಗರಾಜ ಎಂ. ಕಮ್ಮಾರ, ಹರಪನಹಳ್ಳಿ ಪಿಎಸ್‌ಐ ಸಿ. ಪ್ರಕಾಶ್, ಹಲುವಾಗಲು ಪಿಎಸ್‌ಐ ಪ್ರಶಾಂತ್ ಹಾಗು ಸಿಬ್ಬಂದಿಯವರು ಕಾರ್ಯಾಚರಣೆ ನಡೆಸಿದ್ದಾರೆ. ವಿಜಯನಗರ ಜಿಲ್ಲಾ ಎಸ್ಪಿ ಡಾ. ಕೆ. ಅರುಣ್ ಪೊಲೀಸರ ಕಾರ್ಯವನ್ನು ಶ್ಲಾಘಿಸಿದ್ದಾರೆ.

## ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ಸ್ವಾಗತ



ದಾವಣಗೆರೆ, ನ.9- ನಗರದ ಪಿ.ಜೆ. ಬಡಾವಣೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಎಲ್‌ಕೆಜಿ - ಯುಕೆಜಿ ಚಿಣ್ಣರಿಗೆ ಚಾಕೊಲೇಟ್ ನೀಡಿ ಸ್ವಾಗತಿಸಲಾಯಿತು.

## ದೇಶದ ಕೊರೊನಾ ಲಸಿಕೆ ಪ್ರಮಾಣ ಪತ್ರಕ್ಕೆ 96 ದೇಶಗಳ ಮಾನ್ಯತೆ

ನವದೆಹಲಿ, ನ. 9 – ಭಾರತದ ಕೊರೊನಾ ಲಸಿಕೆ ಪ್ರಮಾಣ ಪತ್ರಕ್ಕೆ ಮಾನ್ಯತೆ ನೀಡಲು 96 ದೇಶಗಳು ಸಮ್ಮತಿಸಿವೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ತಿಳಿಸಿದ್ದಾರೆ.

ದೇಶದ ಕೊರೊನಾ ಪ್ರಮಾಣ ಪತ್ರಕ್ಕೆ ಮಾನ್ಯತೆ ಪಡೆಯಲು ಇನ್ನೂ ಹಲವು ದೇಶಗಳ ಜೊತೆ ಚರ್ಚೆ ನಡೆಸಲಾಗುತ್ತಿದೆ. ಇದರಿಂದಾಗಿ ಶಿಕ್ಷಣ, ಉದ್ಯಮ ಹಾಗೂ ಪ್ರವಾಸಕ್ಕಾಗಿ ತೆರಳುವವರಿಗೆ ಅನುಕೂಲವಾಗಲಿದೆ ಎಂದು ಮಾಂಡವೀಯ ಹೇಳಿದ್ದಾರೆ.

ಪ್ರಸಕ್ತ 96 ದೇಶಗಳು ಲಸಿಕೆ ಪ್ರಮಾಣ ಪತ್ರಕ್ಕೆ ಪರಸ್ಪರ ಮಾನ್ಯತೆ ನೀಡಲು ಸಮ್ಮತಿಸಿವೆ. ಹೀಗಾಗಿ ಈ ದೇಶಗಳಿಗೆ ತೆರಳುವವರಿಗೆ ಕೆಲ ವಿನಾಯಿತಿಗಳು ಸಿಗಲಿವೆ ಎಂದು ಸಚಿವರು ಹೇಳಿದ್ದಾರೆ.

## ಮುಂದಿನ ವಾರ ಬ್ಯಾಂಕುಗಳ ಜೊತೆ ಹಣಕಾಸು ಸಚಿವರ ಸಭೆ

ನವದೆಹಲಿ, ನ. 9 – ಕೊರೊನಾದಿಂದ ತತ್ತರಿಸಿರುವ ಆರ್ಥಿಕತೆಗೆ ಬೆಂಬಲ ನೀಡಲು ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮುಂದಿನ ವಾರ ಪರಿಶೀಲನೆ ನಡೆಸಲಿದ್ದಾರೆ.

ಉತ್ಪಾದನಾ ವಲಯಗಳಿಗೆ ಸಾಲಗಳನ್ನು ನೀಡುವ ಮೂಲಕ ಆರ್ಥಿಕತೆಗೆ ಚೇತರಿಕೆ ನೀಡುವಂತೆ ಬ್ಯಾಂಕುಗಳಿಗೆ ಒತ್ತಾಯಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ನವೆಂಬರ್ 17ರಿಂದ ಎರಡು ದಿನಗಳ ಭೇಟಿ ಆರಂಭವಾಗಲಿದೆ. ಆತ್ಮನಿರ್ಭರ ಭಾರತ ಅಭಿಯಾನ ಸೇರಿದಂತೆ ಹಲವಾರು ಯೋಜನೆಗಳಲ್ಲಿ ಬ್ಯಾಂಕುಗಳು ಸಾಧಿಸಿರುವ ಪ್ರಗತಿಯ ಕುರಿತು ಪರಿಶೀಲಿಸಲಾಗುವುದು. ಬ್ಯಾಂಕುಗಳ ಉನ್ನತ ಅಧಿಕಾರಿಗಳಷ್ಟೇ ಅಲ್ಲದೇ ಹಲವಾರು ಸಚಿವಾಲಯಗಳ ಅಧಿಕಾರಿಗಳೂ ಸಹ ಸಭೆಯಲ್ಲಿ ಉಪಸ್ಥಿತರಿದ್ದು, ಸುಗಮ ಕಾರ್ಯ ನಿರ್ವಹಣೆಗೆ ಸಲಹೆ ನೀಡಲಿದ್ದಾರೆ.

ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಸಚಿವಾಲಯಗಳು, ಕೃಷಿ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೂ ಸಹ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಗ್ರಾಹಕರ ಸರಕುಗಳ ಬೇಡಿಕೆ ಹಾಗೂ ಬಳಕೆ ಹೆಚ್ಚಿಸುವಲ್ಲಿ ಬ್ಯಾಂಕಿಂಗ್ ವಲಯ ಮಹತ್ವದ ಪಾತ್ರ ವಹಿಸಿದೆ. ಈ ಹಿನ್ನೆಲೆಯಲ್ಲಿ ಬ್ಯಾಂಕಿನ ಉನ್ನತ ಅಧಿಕಾರಿಗಳು ಭಾಗವಹಿಸಲಿರುವ ಈ ಸಭೆಯು ಪ್ರಾಮುಖ್ಯತೆ ಪಡೆದಿದೆ ಎಂದು ಮೂಲಗಳು ಹೇಳಿವೆ.

## ವಿದೇಶಿ ದೇಣಿಗೆ ಮೂಲಭೂತ ಹಕ್ಕಲ್ಲ : ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ

ನವದೆಹಲಿ, ನ. 9 – ವಿದೇಶದಿಂದ ದೇಣಿಗೆ ಪಡೆಯುವುದು ಮೂಲಭೂತ ಹಕ್ಕಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿರುವ ಕೇಂದ್ರ ಸರ್ಕಾರ, ವಿದೇಶಿ ದೇಣಿಗೆಗೆ ನಿಯಂತ್ರಣ ಇರದೇ ಹೋದರೆ, ವಿನಾಶಕಾರಿ ಪರಿಣಾಮಗಳು ಎದುರಾಗುತ್ತವೆ ಎಂದು ಹೇಳಿದೆ. ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆ 2010ಕ್ಕೆ ತಿದ್ದುಪಡಿ ತಂದಿರುವುದನ್ನು ಸಮರ್ಥಿಸಿಕೊಂಡಿರುವ ಸರ್ಕಾರ, ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ತರಲು ಕ್ರಮ ತೆಗೆದುಕೊಂಡಿರುವುದಾಗಿ ಹೇಳಿದೆ.

ವಿದೇಶಿ ದೇಣಿಗೆ ಪಡೆಯುವುದು ಮೂಲಭೂತ ಹಕ್ಕಲ್ಲ, ಇದರ ಮೇಲೆ ನಿಯಂತ್ರಣ ಇರಬೇಕಿದೆ ಎಂದು ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ ಹೇಳಿದ್ದಾರೆ. ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ದಿನೇಶ್ ಮಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಅವರನ್ನು ಒಳಗೊಂಡ ಪೀಠದ ಎದುರು ಮೆಹ್ತ ಈ ಹೇಳಿಕೆ ನೀಡಿದ್ದಾರೆ.

ಭಾರತ ವಿದೇಶಿ ದೇಣಿಗೆ ಕುರಿತು ಹಿಂದಿನಿಂದಲೂ ಎಚ್ಚರಿಕೆ ವಹಿಸುತ್ತಾ ಬಂದಿದೆ. ಎಫ್.ಸಿ.ಆರ್.ಎ.ದ ನಿಯೋಜಿತ ಖಾತೆಯ ಮೂಲಕ ಮಾತ್ರ ದೇಣಿಗೆ ಪಡೆಯಬಹುದು ಎಂದು ಮೆಹ್ತ ತಿಳಿಸಿದ್ದಾರೆ.

## ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಆನ್‌ಲೈನ್‌ನಲ್ಲಿ ಹಕ್ಕು - ಆಕ್ಷೇಪಣೆಗೆ ಅವಕಾಶ



ಹರಿಹರ, ನ.9- ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ನಡೆದಿದ್ದು, ಹರಿಹರ ಕ್ಷೇತ್ರದ ಮತದಾರರಿಗೆ ಆನ್‌ಲೈನ್ ಮುಖಾಂತರ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಸದಾವಕಾಶವನ್ನು ನೀಡಿದ್ದು, ಸಾರ್ವಜನಿಕರು ಬಳಸಿಕೊಳ್ಳಲು ತಹಶೀಲ್ದಾರ್ ರಾಮಚಂದ್ರಪ್ಪ ಹೇಳಿದರು.

ನಗರದ ಗುರುಭವನದ ಸಭಾಂಗಣದಲ್ಲಿ ಇಂದು ನಡೆದ ತಾಲ್ಲೂಕಿನ ಬಿಎಲ್‌ಓಗಳ ಸಭೆಯಲ್ಲಿ ಅವರು ಮಾತನಾಡಿದರು.

ಈಗಾಗಲೇ ಅಂಗನವಾಡಿ ಶಿಕ್ಷಕಿಯರು ಮತ್ತು ಬಿಎಲ್‌ಓ ಸಿಬ್ಬಂದಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದ್ದೀರಾ. ಈ ಬಾರಿ ಕೂಡ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಸಂಬಂಧಿಸಿದ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಲು ತಿಳಿಸಿದರು.

ಮತದಾರರು ಹಕ್ಕು ಮತ್ತು ಆಕ್ಷೇಪಣೆಗಳನ್ನು ಅಂದರೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ, ನಮೂನೆ-6 ರಲ್ಲಿ ಆಕ್ಷೇಪಣೆ, ಮತದಾರರ ಪಟ್ಟಿಯಲ್ಲಿ ಹೆಸರು ತೆಗೆದು ಹಾಕಲು ನಮೂನೆ-7 ರಲ್ಲಿ ಮತದಾರರ ವಿವರ ತಿದ್ದುಪಡಿಗೆ ನಮೂನೆ-8 ರಲ್ಲಿ ಹಾಗೂ ವಿಧಾನಸಭಾ ಕ್ಷೇತ್ರದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ವರ್ಗಾವಣೆಗೆ ನಮೂನೆ 8ಎ ರಲ್ಲಿ ಅರ್ಜಿಯನ್ನು ಸಂಬಂಧಿಸಿದ ಮತಗಟ್ಟೆಗಳಲ್ಲಿ, ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಹಾಗೂ ನಿರ್ಧಿಷ್ಟಾಧಿಕಾರಿಗಳಿಗೆ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸಬಹುದು.

ಮತದಾರರು voter helpline App, www.nvsp.in ವೆಬ್‌ಸೈಟ್ ಮುಖಾಂತರ , voter portal( www.voterportal.eci.gov.in) ಸಾಮಾನ್ಯ ಸೇವಾ ಕೇಂದ್ರದ ಮುಖಾಂತರ (CSC) ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಸರಿಯಾಗಿರುವ ಬಗ್ಗೆ ಕರಡು ಮತದಾರರ ಪಟ್ಟಿಯನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದರು.

ಬಿಇಓ ಸಿದ್ದಪ್ಪ ಮಾತನಾಡಿ, ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಹಲವು ನ್ಯೂನತೆಗಳು ಬರುತ್ತವೆ. ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ಶಿಕ್ಷಣ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ನಿರ್ವಹಣೆ ಮಾಡುತ್ತಿದ್ದು ,ಎಲ್ಲರೂ ತಮಗೆ ವಹಿಸಿದ ಜವಾಬ್ದಾರಿಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ತಾಂತ್ರಿಕ ಸಲಹೆಗಾರ ದುರುಗಪ್ಪ, ಪ್ರಶಾಂತ್, ಸೋಮಶೇಖರ, ಉಮೇಶ್, ಮಲ್ಲಿಕಾರ್ಜುನ್, ಸಮೀರ್, ಹೇಮಂತ್, ಆನಂದ್ ಮಲೇಬೆನ್ನೂರು ಇನ್ನಿತರರಿದ್ದರು.

## ವಿನೋಬನಗರ : ಅಂಗನವಾಡಿ ಆರಂಭ



ದಾವಣಗೆರೆ,ನ.9- ವಿನೋಬನಗರದ 3ನೇ ಮುಖ್ಯ ರಸ್ತೆಯ ಅಂಗನವಾಡಿ ಕೇಂದ್ರದಲ್ಲಿ ದೀಪ ಬೆಳಗುವ ಮೂಲಕ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಅವರು ಅಂಗನವಾಡಿ ಕೇಂದ್ರವನ್ನು ಪುನರಾರಂಭಗೊಳಿಸಿದರು.

## ಹಾವೇರಿ : ನೆಹರು ಯುವ ಕೇಂದ್ರದಿಂದ ಭಾಷಣ ಸ್ಪರ್ಧೆ

ಹಾವೇರಿ, ನ.9- ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದ ನೆಹರು ಯುವ ಕೇಂದ್ರದ ವತಿಯಿಂದ ಜಿಲ್ಲೆಯ ಯುವ ಜನರಿಗಾಗಿ ದೇಶಭಕ್ತಿ ರಾಷ್ಟ್ರ ನಿರ್ಮಾಣದ ಕುರಿತ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್, ಸಬ್‌ಕಾ ಪ್ರಯಾಸ್ ಎಂಬ ವಿಷಯದ ಕುರಿತು ಭಾಷಣ ಸ್ಪರ್ಧೆ ಏರ್ಪಡಿಸಲಾಗಿದೆ.

ತಾಲ್ಲೂಕು ಮಟ್ಟದಲ್ಲಿ ಇದೇ ದಿನಾಂಕ 20ರ ವರೆಗೆ, ಜಿಲ್ಲಾ ಮಟ್ಟದಲ್ಲಿ ಇದೇ ದಿನಾಂಕ 21ರಿಂದ ಡಿಸೆಂಬರ್ 15ರ ವರೆಗೆ ಹಾಗೂ ರಾಷ್ಟ್ರ ಮಟ್ಟದಲ್ಲಿ ಜನವರಿ 26ರೊಳಗಾಗಿ ಸ್ಪರ್ಧೆ ಏರ್ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಯುವ ಅಧಿಕಾರಿಗಳು (9986348414), ನೆಹರು ಯುವ ಕೇಂದ್ರ ಎ.ಎಲ್. ಕಾಮತ್ ಬಿಲ್ಡಿಂಗ್, ವಿದ್ಯಾನಗರ, 3ನೇ ಕ್ರಾಸ್ ಬಸ್‌ಸ್ಟ್ಯಾಂಡ್ ರೋಡ್, ಹಾವೇರಿ ಹಾಗೂ ಸಂಬಂಧಪಟ್ಟ ತಾಲ್ಲೂಕು ರಾಷ್ಟ್ರೀಯ ಯುವ ಕಾರ್ಯಕರ್ತರನ್ನು ಸಂಪರ್ಕಿಸಬಹುದು.

## ನಟ ಪುನೀತ್‌ಗೆ ಶ್ರದ್ಧಾಂಜಲಿ



ದಾವಣಗೆರೆ, ನ. 9- ಭಾರತಿ ಮತ್ತು ಸ್ನೇಹಿತೆಯರಿಂದ ಪುನೀತ್ ರಾಜ್‌ಕುಮಾರ್ ರವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ದೀಪ ಬೆಳಗುವುದರ ಮೂಲಕ ಹಾಗೂ ಮೌನಾಚರಣೆ ಮಾಡುವುದರ ಮೂಲಕ ಗೌರವ ಸಲ್ಲಿಸಲಾಯಿತು. ಪುನೀತ್ ಅವರ ಸಮಾಜ ಮುಖಿ ಕಾರ್ಯಗಳ ಪಾಲನೆಯನ್ನು ನಾವೂ ಸಹ ಅನುಸರಿಸಬೇಕೆಂದು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

## ಪೌರ ಕಾರ್ಮಿಕರಿಗೆ ರಾಜ್ಯೋತ್ಸವ ಪ್ರಶಸ್ತಿ : ಸಂತಸ

ದಾವಣಗೆರೆ, ನ.9- ಯಾದಗಿರಿಯ ಪೌರಕಾರ್ಮಿಕ ಮಹಿಳೆ ರತ್ನಮ್ಮ ಕೋಂ ಶಿವಪ್ಪನವರಿಗೆ ರಾಜ್ಯ ಸರ್ಕಾರ ಗುರ್ತಿಸಿ, ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದನ್ನು ದಾವಣಗೆರೆ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಸತಿ ಹೀನರ ಸಂಘವು ಅಭಿನಂದಿಸಿದೆ. ಯಾವುದೇ ಸರ್ಕಾರಗಳು ಇದುವರೆಗೂ ಪೌರ ಕಾರ್ಮಿಕರನ್ನು ಗುರ್ತಿಸಿರುವುದಿಲ್ಲ. ಆದರೆ ಇಂದಿನ ಸರ್ಕಾರ ಗುರುತಿಸುವ ಮೂಲಕ ಪೌರ ಕಾರ್ಮಿಕರಿಗೆ ಉತ್ತೇಜನ ಹಾಗೂ ಪ್ರೋತ್ಸಾಹ ನೀಡಿದಂತಾಗಿದೆ ಎಂದು ಸಂಘದ ಅಧ್ಯಕ್ಷ ಸಿ. ಅಂಜಿನಪ್ಪ ಕಡತಿ ತಿಳಿಸಿದ್ದಾರೆ.

## ಅಪಘಾತದಲ್ಲಿ ಅಪರಿಚಿತನ ಸಾವು

**ಹರಿಹರ**

ದಾವಣಗೆರೆ, ನ.9 - ಹರಿಹರ-ಶಿವಮೊಗ್ಗ ರಸ್ತೆಯಲ್ಲಿನ ಇಂಡಿಯನ್ ಡಾಬಾ ಮುಂಭಾಗ ಕಳೆದ ಸೆ. 9 ರಂದು ರಾತ್ರಿ ಅಪರಿಚಿತ ವಾಹನವು ಸುಮಾರು 60 ವರ್ಷ ವಯಸ್ಸಿನ ಅಪರಿಚಿತ ಪಾದಚಾರಿಗೆ ಡಿಕ್ಕಿ ಹೊಡೆದಿದ್ದು, ಗಾಯಗೊಂಡಿದ್ದ ಆತ ಮೃತಪಟ್ಟಿದ್ದಾನೆ.

ಗಾಯಾಳುವನ್ನು ಹರಿಹರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, ಆತನ ವಾರಸುದಾರರು ಪತ್ತೆಯಾಗದ ಕಾರಣ ಕಾನೂನು ರೀತ್ಯಾ ಅಂತ್ಯಕ್ರಿಯೆ ನಡೆಸಲಾಗಿದೆ.

ಮೃತನು ಎಣ್ಣೆಗೆಂಪು ಬಣ್ಣ, ದುಂಡು ಮುಖ, ಸಾಧಾರಣ ಮೈಕಟ್ಟು, ಬಿಳಿ ಗಡ್ಡವಿರುತ್ತದೆ. ಬಿಳಿ ತುಂಬು ತೋಳಿನ ಶರ್ಟ್, ಸಿಮೆಂಟ್ ಕಲರ್ ಪ್ಯಾಂಟ್, ನೀಲಿ ಚಡ್ಡಿ ಧರಿಸಿರುತ್ತಾನೆ. ವಿವರಕ್ಕೆ ಸಿ.ಪಿ.ಐ ಹರಿಹರ ವೃತ್ತ (9480803234), ಪಿ.ಎಸ್.ಐ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆ (9480803258) ಯನ್ನು ಸಂಪರ್ಕಿಸಬಹುದು.


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ವಾಸಿ
ಶ್ರೀಯುತ ಬೂಸ್ನೂರು ವಿರುಪಾಕ್ಷಪ್ಪ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 02.11.2021ನೇ
ಮಂಗಳವಾರ ಬೆಳಗಿನ ಜಾವ 3.30ಕ್ಕೆ
ನನ್ನ ಧರ್ಮಪತ್ನಿ
**ಶ್ರೀಮತಿ ಸುಶೀಲಮ್ಮನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಶಿವಗಣಾರಾಧನೆಯನ್ನು**
ದಿನಾಂಕ 10.11.2021ನೇ ಬುಧವಾರ ಮಧ್ಯಾಹ್ನ 12.30ಕ್ಕೆ
ಶ್ರೀ ಕೃಷ್ಣ ಕಲಾ ಮಂದಿರ # 2256, ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ-4
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು
ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಬೂಸ್ನೂರು ವಿರೂಪಾಕ್ಷಪ್ಪ ಮತ್ತು ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು



॥ ಶ್ರೀ ಸಿದ್ದೇಶ್ವರ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ, ತಾ||, ಅಣಜಿ ಗ್ರಾಮದ ವಾಸಿ
ದಿ|| ಶ್ರೀ ಸಿದ್ದನೂರು ಚಂದ್ರಪ್ಪನವರ ಮಗ
ಶ್ರೀ ಎಸ್.ಸಿ. ವಿಶ್ವನಾಥ ಶ್ರೀಮತಿ ಅಕ್ಕಮಹಾದೇವಿ
ಮತ್ತು ಮಕ್ಕಳು, ಮಾಡುವ ವಿಜ್ಞಾಪನೆಗಳು.
ದಿನಾಂಕ : 06.11.2021ನೇ ಶನಿವಾರ ರಾತ್ರಿ 9.00 ಕ್ಕೆ
ನನ್ನ ಪೂಜ್ಯ ತಾಯಿಯವರಾದ
**ಶ್ರೀಮತಿ ಜಯ್ಯಮ್ಮನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 10.11.2021ನೇ ಬುಧವಾರ ಬೆಳಿಗ್ಗೆ 11.00ಕ್ಕೆ ಅಣಜಿ ಗ್ರಾಮದ ಮೃತರ
ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು
ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀ ಎಸ್.ಸಿ. ವಿಶ್ವನಾಥ ಶ್ರೀಮತಿ ಅಕ್ಕಮಹಾದೇವಿ ಮತ್ತು ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು, ಸಿದ್ದನೂರು ವಂಶಸ್ಥರು ಅಣಜಿ ಹಾಗೂ
ಬಂಧು-ಮಿತ್ರರು. ಫೋ. : 95356 64073

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



### ನಿಟ್ಟೂರು ಗ್ರಾಮದ ದ್ಯಾವಪ್ಪರ ಇಂದಿರಮ್ಮ ನಿಧನ



ಹರಿಹರ ತಾಲ್ಲೂಕು ನಿಟ್ಟೂರು ಗ್ರಾಮದ
ದಿ. ದ್ಯಾವಪ್ಪರ ಚನ್ನಬಸಪ್ಪ ಇವರ ಮಗನಾದ
ಡಿ.ಸಿ. ಸಿದ್ದೇಶ್ ಅವರ ಪತ್ನಿ
**ಶ್ರೀಮತಿ ಇಂದಿರಮ್ಮ**
(45 ವರ್ಷ) ಇವರು ದಿನಾಂಕ
9.11.2021ರ ಮಂಗಳವಾರ ರಾತ್ರಿ10.35ಕ್ಕೆ
ನಿಧನರಾದರು. ಪತಿ, ಓರ್ವ ಪುತ್ರ ಸೇರಿದಂತೆ
ಅಪಾರ ಬಂಧು-ಬಳಗವನ್ನು ಅಗಲಿರುವ
ಮೃತರ ಅಂತ್ಯಕ್ರಿಯೆಯು ದಿನಾಂಕ
10.11.2021ರ ಬುಧವಾರ ಮಧ್ಯಾಹ್ನ 2
ಗಂಟೆಗೆ ನಿಟ್ಟೂರು ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು: ಡಿ. ಹೊನ್ನಪ್ಪ ಮತ್ತು ಎಸ್.ಜಿ. ಹನುಮಂತಪ್ಪ
ಹಾಗೂ ಬಂಧು-ಮಿತ್ರರು.


### ಶ್ರೀಮತಿ ಅಂಬುಜಾಕ್ಷಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ಕುವೆಂಪುನಗರ 15ನೇ ಮೇನ್, ಬಾಪೂಜಿ ಸ್ಕೂಲ್ ಹಿಂಭಾಗದ ವಾಸಿ ಜಯದೇವ ಬೂಸ್ನೂರು ಇವರ ಧರ್ಮಪತ್ನಿ ಶ್ರೀಮತಿ ಅಂಬುಜಾಕ್ಷಿ (58) ಅವರು ದಿನಾಂಕ 9.11.2021ರ ಮಂಗಳವಾರ ಬೆಳಿಗ್ಗೆ 11.45ಕ್ಕೆ ನಿಧನರಾಗಿದ್ದಾರೆ. ಪತಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.11.2021ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಮಾವಿನಕಟ್ಟೆ ಬಳಿ ರಸ್ತೆ ಅಪಘಾತ

ಚನ್ನಗಿರಿ, ನ.9- ರಸ್ತೆ ಅಪಘಾತದಿಂದ ಮೂವರು ಯುವಕರು ಗಾಯಗೊಂಡಿರುವ ಘಟನೆ ಮಾವಿನಕಟ್ಟೆ ಸುಣಿಗೆರೆ ಬಳಿ ನಡೆದಿದೆ. ಸಲೀಂ, ಖಲಂದರ್, ಅಬ್ಬು ಗಾಯಗೊಂಡ ಯುವಕರು.

ಗಾಯಾಳುಗಳು ಚನ್ನಗಿರಿ ವಾಸಿಗಳಾಗಿದ್ದು, ಹೊಳೆಹೊನ್ನೂರಿನಿಂದ ಮರ ಕೊಯ್ಯುವ ಯಂತ್ರ ಸಹಿತ ಬೈಕ್ ನಲ್ಲಿ ಚನ್ನಗಿರಿಗೆ ವಾಪಾಸ್ ಈ ಮೂವರು ಬರುತ್ತಿದ್ದರು. ಈ ವೇಳೆ ಬೈಕ್ ಗೆ ಟ್ರ್ಯಾಕ್ಟರ್ ಡಿಕ್ಕಿಯಾದ ಕಾರಣ ಅಪಘಾತ ಸಂಭವಿಸಿದೆ. ಇಬ್ಬರ ಸ್ಥಿತಿ ಗಂಭೀರವಾಗಿದೆ.

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ನವೆಂಬರ್ 10, 2021


## 18 ಕ್ಕೆ ಬಿಜೆಪಿಯ ಜನ ಸ್ವರಾಜ್ ಯಾತ್ರೆ

ಬೆಂಗಳೂರು, ನ. 9 – ಮುಂಬರುವ ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿ ಚುನಾವಣೆಗಳ ಹಿನ್ನೆಲೆಯಲ್ಲಿ ಬಿಜೆಪಿ ಮುಂದಿನ ನವೆಂಬರ್ 18ರಿಂದ ನಾಲ್ಕು ದಿನಗಳ ಕಾಲ ಜನ ಸ್ವರಾಜ್ ಯಾತ್ರೆ ಕೈಗೊಳ್ಳಲಿದೆ ಎಂದು ಪಕ್ಷದ ವಕ್ತಾರ ಗಣೇಶ್ ಕಾರ್ನಿಕ್ ತಿಳಿಸಿದ್ದಾರೆ.

ಜನ ಸ್ವರಾಜ್ ಯಾತ್ರೆಯಲ್ಲಿ ನಾಲ್ಕು ತಂಡಗಳು ರಾಜ್ಯದ ನಾಲ್ಕು ದಿಸೆಗಳಲ್ಲಿ ನಾಲ್ಕು ದಿನ ಸಂಚಾರ ನಡೆಸಲಿವೆ ಎಂದು ಕಾರ್ನಿಕ್ ಹೇಳಿದ್ದಾರೆ.

ರಾಜ್ಯ ಬಿಜೆಪಿ ಪದಾಧಿಕಾರಿಗಳ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಬೂತ್ ಹಂತದಲ್ಲಿ ಪಕ್ಷವನ್ನು ಬಲಗೊಳಿಸುವುದು ಈ ಯಾತ್ರೆಯ ಉದ್ದೇಶ ಎಂದವರು ತಿಳಿಸಿದ್ದಾರೆ.

ಮುಂಬರುವ 25 ಪರಿಷತ್ ಸ್ಥಾನಗಳ ಚುನಾವಣೆಯ ಬಗ್ಗೆಯೂ ಬಿಜೆಪಿ ನಾಯಕರ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಕಾರ್ನಿಕ್ ಹೇಳಿದ್ದಾರೆ.

## ಕೈ ಸೋಲಿಸುವ ಏಕೈಕ ಕಾರ್ಯತಂತ್ರ ಕೈ ಬಿಡಲು ಜೆಡಿಎಸ್ ನಿರ್ಧಾರ

ಬೆಂಗಳೂರು, ನ.9- ಉಪಚುನಾವಣೆಯ ಸೋಲಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವ ಏಕೈಕ ಉದ್ದೇಶದ ಕಾರ್ಯತಂತ್ರವನ್ನು ಕೈ ಬಿಡಲು ಜೆಡಿಎಸ್ ನಿರ್ಧರಿಸಿದೆ.

ಸೋಮವಾರ ಆರಂಭವಾದ ಜನತಾ ಸಂಗಮ ಕಾರ್ಯಾಗಾರದ ಸಂದರ್ಭದಲ್ಲಿ ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪಕ್ಷದ ಹಿರಿಯ ನಾಯಕರಿಗೆ ಇದರ ಸುಳಿವು ನೀಡಿದ್ದಾರೆ. ಉನ್ನತ ಮೂಲಗಳು ಈ ವಿಷಯವನ್ನು ತಿಳಿಸಿದ್ದು, ಸಿಂಧಗಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಅನುಭವದ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದು ವಿವರ ನೀಡಿವೆ.

ಮುಸ್ಲಿಂ ಮತದಾರರ ಮನಃಸ್ಥಿತಿ ಅರಿಯುವ ಉದ್ದೇಶದಿಂದ ಸಿಂಧಗಿ ವಿಧಾನಸಭಾ ಕ್ಷೇತ್ರದಲ್ಲಿ ಅದೇ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಲಾಯಿತು, ಆದರೆ ಮುಸ್ಲಿಮರು (5ನೇ ಪುಟಕ್ಕೆ)

## ರೈತರಿಂದ ಟ್ರ್ಯಾಕ್ಟರ್ ಮೆರವಣಿಗೆ

ನವದೆಹಲಿ, ನ. 9 – ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟಕ್ಕೆ ಒಂದು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ, ಸಂಸತ್ತಿನ ಚಳಿಗಾಲದ ಅಧಿವೇಶನದ ಪ್ರತಿಯೊಂದು ದಿನ 500 ರೈತರು ಸಂಸತ್ತಿಗೆ ಟ್ರ್ಯಾಕ್ಟರ್ ಮೆರವಣಿಗೆ ನಡೆಸಲಿದ್ದಾರೆ ಎಂದು ಪ್ರತಿಭಟನಾ ನಿರತ ರೈತ ಒಕ್ಕೂಟಗಳು ತಿಳಿಸಿವೆ. ನ. 29ರಿಂದ ಚಳಿಗಾಲದ ಅಧಿವೇಶನ ನಡೆಯಲಿದೆ. (5ನೇ ಪುಟಕ್ಕೆ)

# ಡಿ.10 ರಂದು ವಿಪ ಚುನಾವಣೆ

## 25 ಸ್ಥಾನಗಳಿಗಾಗಿ ಸ್ಥಳೀಯ ಸಂಸ್ಥೆಗಳಿಂದ ನಡೆಯಲಿರುವ ಚುನಾವಣೆ, ಡಿ.14ಕ್ಕೆ ಫಲಿತಾಂಶ

ಬೆಂಗಳೂರು, ನ.9- ಸ್ಥಳೀಯ ಸಂಸ್ಥೆಗಳಿಂದ ರಾಜ್ಯ ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ಡಿಸೆಂಬರ್ 10 ರಂದು ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ಅಧಿಸೂಚನೆ ಪ್ರಕಟಿಸಿದೆ.

ಈ ಸ್ಥಳೀಯ ಸಂಸ್ಥೆಗಳಿಂದ ನಡೆಯಲಿರುವ ಚುನಾವಣೆಯ ಫಲಿತಾಂಶ ಡಿಸೆಂಬರ್ 14 ರಂದು ಪ್ರಕಟವಾಗಲಿದೆ.

ಮೈಸೂರು, ಮಂಡ್ಯ ಕೊಡಗು, ಹಾಸನ, ಚಿತ್ರದುರ್ಗ, ಬೀದರ್, ಗುಲ್ಬರ್ಗ, ವಿಜಯಪುರ, ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ರಾಯಚೂರು, ಬಳ್ಳಾರಿ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ಈ ಕ್ಷೇತ್ರಗಳಿಗೆ ಚುನಾವಣೆ ಜರುಗಲಿದೆ.

ಅತಿ ಹೆಚ್ಚು ಮತದಾರರನ್ನು ಹೊಂದಿರುವ ಸ್ಥಳೀಯ ಸಂಸ್ಥೆಗಳ ಪೈಕಿ ಮೈಸೂರು, ದಕ್ಷಿಣ ಕನ್ನಡ, ಧಾರವಾಡ, ಬೆಳಗಾವಿ, ಹಾಗೂ ವಿಜಯಪುರ ಜಿಲ್ಲೆಗಳು ಸೇರಿದ್ದು, ಇವುಗಳಲ್ಲಿ ಜಿಲ್ಲೆಯ ತಲಾ ಎರಡು ಕ್ಷೇತ್ರಗಳಿಂದ ಇಬ್ಬರು ಅಭ್ಯರ್ಥಿಗಳನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಬೇಕಾಗಿದೆ.

ಪ್ರಸಕ್ತ ಸ್ಥಳೀಯ ಸಂಸ್ಥೆಗಳ ಸದಸ್ಯರ ಅವಧಿ 2022 ರ ಜನವರಿ 5ಕ್ಕೆ ಅಂತ್ಯಗೊಳ್ಳುವ ಹಿನ್ನೆಲೆಯಲ್ಲಿ ಈ ಕ್ಷೇತ್ರಗಳಿಗೆ ಚುನಾವಣೆ ನಡೆಸಲು ನವೆಂಬರ್ 16 ರಂದು ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸಲಿದ್ದಾರೆ.

ನವೆಂಬರ್ 23 ರಂದು ನಾಮಪತ್ರ ಸಲ್ಲಿಸಲು ಕಡೇ ದಿನವಾಗಿರುತ್ತದೆ. 24 ರಂದು ನಾಮಪತ್ರ ಪರಿಶೀಲನೆ, 26 ರಂದು ನಾಮಪತ್ರ ಹಿಂತೆಗೆದುಕೊಳ್ಳಲು ಕಡೆಯ ದಿನವಾಗಿರುತ್ತದೆ.

ಡಿಸೆಂಬರ್ 10 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೂ ಮತದಾನ ನಡೆಯಲಿದ್ದು, ಡಿಸೆಂಬರ್ 14 ರಂದು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಮತ ಎಣಿಕೆ ನಡೆಯಲಿದೆ.

ಕೋವಿಡ್-19 ಕಾರಣದಿಂದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ಜರುಗಲಿಲ್ಲ. ಚುನಾವಣೆಯಲ್ಲಿ ಕೇವಲ ಪಂಚಾಯತ್ ಸದಸ್ಯರು ಮಾತ್ರ ಮತದಾನ ಮಾಡಲು ಅವಕಾಶವಿದೆ. ಚುನಾವಣೆ ನಡೆಯಲಿರುವ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಧಿಸೂಚನೆ ಪ್ರಕಟಣೆಯ ಕ್ಷಣದಿಂದಲೇ ನೀತಿ ಸಂಹಿತೆ ಜಾರಿಗೆ ಬಂದಿದೆ.

ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿ ಡಿಸೆಂಬರ್ ಮಧ್ಯಭಾಗದಲ್ಲಿ ನಡೆಸಲು ಉದೇಶಿಸಿದ್ದ ವಿಧಾನಮಂಡಲದ ಅಧಿವೇಶನ ಸ್ವಲ್ಪದಿನ ಮುಂದೂಡುವ ಸಾಧ್ಯತೆ ಇದೆ.

ಮೈಸೂರು, ಚಾಮರಾಜನಗರ ಸ್ಥಳೀಯ ಸಂಸ್ಥೆಯಿಂದ ಕಳೆದ ಚುನಾವಣೆಯಲ್ಲಿ ಸಂದೇಶ್ ನಾಗರಾಜ್ ಹಾಗೂ ಆರ್. ಧರ್ಮಸೇನಾ, ಕೊಡಗಿನಿಂದ ಸುನೀಲ್ ಸುಬ್ರಮಣಿ, ಕೋಲಾರದಿಂದ ಸಿ.ಆರ್. ಮನೋಹರ್, ಬೆಂಗಳೂರು ಗ್ರಾಮಾಂತರದಿಂದ ಎಸ್.ರವಿ, ಬೆಂಗಳೂರಿನಿಂದ ಎಂ. ನಾರಾಯಣಸ್ವಾಮಿ, ಮಂಡ್ಯದಿಂದ ಎನ್. (5ನೇ ಪುಟಕ್ಕೆ)

### ಜಿಲ್ಲೆಯಲ್ಲಿ ನೀತಿ ಸಂಹಿತೆ ಜಾರಿ

**ದಾವಣಗೆರೆ, ನ. 9- ವಿಧಾನಸಭಾ ಪರಿಷತ್ ಚುನಾವಣೆಯ ವೇಳಾಪಟ್ಟಿ ಘೋಷಣೆಯಾಗಿದ್ದು, ದಾವಣಗೆರೆ ಜಿಲ್ಲೆ ಮತ್ತು ಕ್ಷೇತ್ರ ವ್ಯಾಪ್ತಿಯಲ್ಲಿ ಇಂದಿನಿಂದ ಡಿಸೆಂಬರ್ 16 ರವರೆಗೆ ಮಾದರಿ ನೀತಿ ಸಂಹಿತೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಮಹಾಂತೇಶ ಬೀಳಗಿ ಆದೇಶಿಸಿದ್ದಾರೆ.**

**ಚಿತ್ರದುರ್ಗ ಸ್ಥಳೀಯ ಸಂಸ್ಥೆ ವ್ಯಾಪ್ತಿಗೆ ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲ್ಲೂಕುಗಳು, ಹಾಗೂ ಶಿವಮೊಗ್ಗ ಸ್ಥಳೀಯ ಸಂಸ್ಥೆ ವ್ಯಾಪ್ತಿಗೆ ಚನ್ನಗಿರಿ, ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳು ಒಳಪಡುತ್ತವೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## 'ನಿಮ್ಮ ಕಚೇರಿ ಅಷ್ಟೇ ಅಲ್ಲ, ಮಕ್ಕಳು ವಾಸವಿರುವ ಕೊಠಡಿಗಳೂ ಸಹ ಸ್ಮಾರ್ಟ್ ಆಗಿರಲಿ'

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್‌ಗೆ ಸಲಹೆ ನೀಡಿದ ನ್ಯಾ॥ ರಾಜೇಶ್ವರಿ ಎನ್. ಹೆಗಡೆ



ದಾವಣಗೆರೆ, ನ.9- 'ನಿಮ್ಮ ಕಚೇರಿ ಅಷ್ಟೇ ಅಲ್ಲ, ಮಕ್ಕಳು ವಾಸವಿರುವ ಕೊಠಡಿಗಳೂ ಸಹ ಸ್ಮಾರ್ಟ್ ಆಗಿರಲಿ'

ಹೀಗೆಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ರಾಜೇಶ್ವರಿ ಎನ್. ಹೆಗಡೆ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಹೆಚ್. ವಿಜಯಕುಮಾರ್ ಅವರಿಗೆ ಸಲಹೆ ಕೊಟ್ಟರು.

ರಾಜೇಶ್ವರಿ ಹೆಗಡೆ ಅವರು, ಇಂದು ನಗರದ ಕುವೆಂಪು ನಗರದಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಮೂಲಕ ಮಹಿಳಾ ಸಬಲೀಕರಣ ಶಿಬಿರದ ಉದ್ಘಾಟನೆಗೂ ಮುನ್ನ ಈ ಕಚೇರಿ ಆವರಣದಲ್ಲಿನ ಬಾಲಕರ ಸರ್ಕಾರಿ ಬಾಲಮಂದಿರದ ಹಳೇ ಕಟ್ಟಡದ ಪ್ರತಿಯೊಂದು ಕೊಠಡಿಗಳು, ಒಳ ಹಾಗೂ ಹೊರ ಆವರಣದಲ್ಲಿನ ಕಟ್ಟಡವನ್ನು ವೀಕ್ಷಿಸುತ್ತಾ ವಾಸ್ತವತೆಯನ್ನು ಅವಲೋಕಿಸಿದರು.

ಮಕ್ಕಳು ವಾಸವಿರುವ ಕೊಠಡಿಗಳ ಪೈಕಿ ಬಹುತೇಕ ಕೊಠಡಿಗಳ ಗೋಡೆಗಳ ಬಿರುಕು ಮತ್ತು ಚಕ್ಕಳ ಎದ್ದಿರುವುದು, ಬಣ್ಣ ಮಾಸಿ ಹೋಗಿರುವುದು, ಕಿಟಕಿ ಹಾಳಾಗಿರುವುದು, ಗೋಡೆಗಳಷ್ಟೆ ಅಲ್ಲದೇ ಕೊಠಡಿಗಳ ಮೇಲ್ಛಾವಣಿಯಲ್ಲಿ ಚಕ್ಕಳ ಎದ್ದು ಬಣ್ಣ ಮಾಸಿದ್ದು ಹೀಗೆ ಬಾಲಕರ ಬಾಲಮಂದಿರ ಬಹುತೇಕ ಶಿಥಿಲಾವಸ್ಥೆಗೆ ತಲುಪಿರುವುದನ್ನು ಕಣ್ಣಾರೆ ಕಂಡರು. ಅಲ್ಲದೇ ಈ ವಾತಾವರಣದಲ್ಲಿ ಮಕ್ಕಳಿರುವುದಕ್ಕೆ ನೋವು ಪಟ್ಟುಕೊಂಡರು. ಹಳೇ ಕಟ್ಟಡದ ಶಿಥಿಲಾವಸ್ಥೆ, ಅಭಿವೃದ್ಧಿ ಬಗ್ಗೆ ವಿಜಯ್ ಕುಮಾರ್ ಬಳಿ ಮಾಹಿತಿ ಪಡೆದರು.

ಡಿ.9, 1977ರಂದು ಈ ಕಟ್ಟಡ ಉದ್ಘಾಟನೆಯಾಗಿದ್ದು, ಸುಮಾರು 44 ವರ್ಷಗಳ ಹಳೇ ಕಟ್ಟವಿದಾಗಿದೆ. ಇಲ್ಲಿ ಸುಮಾರು ಹಾಲಿ 45 ಮಕ್ಕಳು ವಾಸವಿದ್ದು, ಸದ್ಯಕ್ಕೆ 38 ಮಕ್ಕಳಿದ್ದು, ಉಳಿದವರು ರಜೆಗೆ ಊರಿಗೆ ಹೋಗಿದ್ದಾರೆ. ಕಟ್ಟಡದ ರಿಪೇರಿಗಾಗಿ ಸುಮಾರು 30 ಲಕ್ಷ ರೂ. ಮಂಜೂರಾತಿಗಾಗಿ ನಮ್ಮ ಇಲಾಖೆಗೆ ಮನವಿ ಮಾಡಿದ್ದೆ. ಇನ್ನೂ ಸ್ವಲ್ಪ ಹಣ ಖರ್ಚು ಮಾಡಿದರೆ ನೂತನ ಕಟ್ಟಡವನ್ನೇ ನಿರ್ಮಿಸಬಹುದೆಂಬ ಅಭಿಪ್ರಾಯ ಕೇಳಿ ಬಂದ ಕಾರಣ, ಈಗಾಗಲೇ ಕಟ್ಟಡದ ಸಾಮರ್ಥ್ಯ ಪರೀಕ್ಷೆ ನಡೆಸಿ, ವರದಿ ನೀಡುವಂತೆ ಇಲ್ಲಿನ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲಾಗಿದೆ. ಈ ಕಟ್ಟಡಕ್ಕೆ ಇನ್ನೂ ಸಾಮರ್ಥ್ಯವಿದ್ದರೆ ರಿಪೇರಿ ಮಾಡಿಸಲಾಗುವುದು, ಹಾಗೇನಾದರೂ ಸಾಮರ್ಥ್ಯವಿಲ್ಲವೆಂದಾದರೆ ನೂತನ ಕಟ್ಟಡಕ್ಕೆ ಚಿಂತನೆ (5ನೇ ಪುಟಕ್ಕೆ)

## ಎಸ್ಸಿ-ಎಸ್ಟಿಗೆ ಹಣ ನೀಡಿ ಮತ ಹಾಕಿಸಿಕೊಳ್ಳುವ ಕಾಲ ಈಗಿಲ್ಲ, ಈಗಿನದು ಪಾಠ ಕಲಿಸುವ ಕಾಲ



ಮಲೇಬೆನ್ನೂರು, ನ.9- ಮುಂದಿನ ವರ್ಷ ಫೆಬ್ರವರಿ 8 ಮತ್ತು 9 ರಂದು ನಡೆಯಲಿರುವ 4ನೇ ವರ್ಷದ ವಾಲ್ಮೀಕಿ ಜಾತ್ರೆಯನ್ನು ಹೊಸ ವಿಷಯಗಳೊಂದಿಗೆ ಇನ್ನಷ್ಟು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶ ಹೊಂದಿದ್ದು, ಅದಕ್ಕಾಗಿ ನಿಮ್ಮ ಸಲಹೆ-ಸಹಕಾರ ಪಡೆಯಲು ಈ ಸಭೆ ಕರೆಯಲಾಗಿದೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ 4ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಇಂದು ಕರೆದಿದ್ದ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಚಿವ ಆನಂದ್ ಸಿಂಗ್ ಅವರು ನಿರ್ಮಿಸುತ್ತಿರುವ ನೂತನ ರಥ ಜಾತ್ರೆಯಲ್ಲಿ ಲೋಕಾರ್ಪಣೆ ಆಗಲಿದೆ. ಜಾತ್ರೆಯಲ್ಲಿ ರೈತರಿಗೆ, ಕಾರ್ಮಿಕರಿಗೆ ವಿದ್ಯಾರ್ಥಿಗಳಿಗೆ ಆದ್ಯತೆ ನೀಡುವುದಾಗಿ ತಿಳಿಸಿದರು. ಸಮಾಜ ಸಂಘಟನೆಗಾಗಿ ರಾಜ್ಯದಲ್ಲಿ ಇದುವರೆಗೆ ಸುಮಾರು 21 ಲಕ್ಷ ಕಿ.ಮೀ. ಪ್ರಯಾಣ ಮಾಡಿದ್ದೇವೆ. ನಮ್ಮ ಸಮಾಜ ದೊಡ್ಡ ಶಕ್ತಿಯಾಗಿ ಹೊರಹೊಮ್ಮಬೇಕು ಮತ್ತು ಜನರಲ್ಲಿ ಜಾಗೃತಿ ಮೂಡಿಸುವುದೇ ಜಾತ್ರೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಕಳೆದ 3 ಜಾತ್ರೆಗಳಲ್ಲಿ ಸಮಾಜದ ಬಂಧುಗಳು ನಿರೀಕ್ಷೆಗೂ ಮೀರಿ ಆರ್ಥಿಕ ನೆರವು ಹಾಗೂ ಬೆಂಬಲ ನೀಡಿದ್ದಾರೆ. ಕಳೆದ ವರ್ಷ ಕೊರೊನಾ ಇದ್ದರೂ ದಾಖಲೆ ಸಂಖ್ಯೆಯಲ್ಲಿ ಜನರು ಜಾತ್ರೆಗೆ ಹರಿದು ಬಂದಿದ್ದರು. 3 (5ನೇ ಪುಟಕ್ಕೆ)

> **"ಸರ್ಕಾರ ಆನೆ ಇದ್ದಂಗೆ, ಆನೆ ಪಳಗಿಸುವ ಕೆಲಸವನ್ನು ಎಸ್ಸಿ - ಎಸ್ಟಿ ಹಾಗೂ ಹಿಂದುಳಿದವರು ಶಿಕ್ಷಣ, ಸಂಘಟನೆ, ಹೋರಾಟ ಎಂಬ ಅಂಕುಶಗಳನ್ನು ಚುಚ್ಚಿ ಎಚ್ಚರಿಸಬೇಕು. ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿ ಬಂದ ತಕ್ಷಣ ಮೀಸಲಾತಿ ಹೆಚ್ಚಳ ಮಾಡುತ್ತೇನೆಂದು ನಮ್ಮನ್ನು ನಂಬಿಸಿ, ಯಡಿಯೂರಪ್ಪ ಕೈಕೊಟ್ಟರು. ಆದರೆ, ಈಗಿನ ಸರ್ಕಾರ ಆ ವರದಿಯನ್ನು ಸುಭಾಷ್ ಆಡಿ ನೇತೃತ್ವದ ಉಪ ಸಮಿತಿಗೆ ನೀಡಿ, ಕಾಲಹರಣ ಮಾಡುತ್ತಿದೆ.**
>
> **- ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ**

## ಕಾಂಗ್ರೆಸ್ ಸೇರಿದ ಜೆಡಿಎಸ್‌ನ ದೇವೇಂದ್ರಪ್ಪ




ಜಗಳೂರು, ನ.9- ಜಗಳೂರು ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ ಪರಾಜಿತ ಅಭ್ಯರ್ಥಿ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಅವರು ತಮ್ಮ ಅಪಾರ ಬೆಂಬಲಿಗರೊಂದಿಗೆ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ದೇವೇಂದ್ರಪ್ಪ ಅವರಿಗೆ ಕಾಂಗ್ರೆಸ್ ಶಾಲು ಹಾಕಿ, ಪಕ್ಷದ ಬಾವುಟ ನೀಡಿ ಅಧಿಕೃತವಾಗಿ ಆಹ್ವಾನಿಸಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಷ್ಟ್ರೀಯ ನಾಯಕರ ನಿರ್ಧಾರದಂತೆ ಯಾವುದೇ ಪಕ್ಷ ತೊರೆದು ಷರತ್ತು ರಹಿತವಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳಲು ಮುಕ್ತ ಅವಕಾಶ ವಿದೆ ಎಂದು ತಿಳಿಸಿದರು.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಮಾಜಿ ಶಾಸಕ ಎಚ್.ಪಿ. ರಾಜೇಶ್, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪಕ್ಷದ ನಾಯಕರ ಬಳಿ ಸಮಾಲೋಚನೆ ನಡೆಸಿ ಷರತ್ತು ರಹಿತವಾಗಿ ದೇವೇಂದ್ರಪ್ಪ ಅವರನ್ನು ಅಧಿಕೃತವಾಗಿ ಪಕ್ಷಕ್ಕೆ ಸೇರ್ಪಡೆ (5ನೇ ಪುಟಕ್ಕೆ)


**ಸುವರ್ಣ ಕರ್ನಾಟಕ ಹಿತ ರಕ್ಷಣಾ ವೇದಿಕೆ (ರಿ.)**

**ಕನ್ನಡ ರಾಜ್ಯೋತ್ಸವ ಹಾಗೂ ಟಿಪ್ಪು ಸುಲ್ತಾನ್ ಜಯಂತ್ಯೋತ್ಸವದ ಹಾರ್ದಿಕ ಶುಭಾಶಯಗಳು**





✦ ಕನ್ನಡಾಂಬೆಯ ಕೀರ್ತಿಯನ್ನು ವಿಶ್ವಕ್ಕೆ ಹರಡಿದ ಕನ್ನಡದಲ್ಲಿ ಕನ್ನಡದ ಕಲಿ ಟಿಪ್ಪು ಸುಲ್ತಾನ್.
✦ ಬ್ರಿಟೀಷರೊಂದಿಗೆ ಸಂಧಾನ ಬಯಸದೆ, ಹಬ್ಬದ ಮನೆಗಳಲ್ಲಿ ಹರಿಯುವ ರಕ್ತದ ಕಣವನ್ನು ಮೈಸೂರಿಗೆ ಚೆಲ್ಲಿದ ತಾಯ್ನಾಡಿನ ಹುಲಿ ಟಿಪ್ಪು ಸುಲ್ತಾನ್.
✦ ನಾಸಾದಲ್ಲಿ ಇಂದಿಗೂ ಜೀವಂತವಿರುವ ನಿದರ್ಶನ ಟಿಪ್ಪು ಸುಲ್ತಾನ್
✦ ವಿಶ್ವದಲ್ಲಿ ಪ್ರಥಮ ಬಾರಿಗೆ ಕ್ಷಿಪಣಿಯನ್ನು ಪರಿಚಯಿಸಿದ ಕ್ಷಿಪಣಿಯ ಜನಕ ಟಿಪ್ಪು ಸುಲ್ತಾನ್.
✦ 60 ಸಾವಿರ ಚದುರ ಮೈಲಿ ಇದ್ದ ಮೈಸೂರು ಸಾಮ್ರಾಜ್ಯವನ್ನು 70 ಸಾವಿರ ಚದುರ ಮೈಲಿಗಳಷ್ಟು ವಿಸ್ತರಿಸಿದ ಅಪ್ರತಿಮ ಸಾಹಸಿ ಟಿಪ್ಪು ಸುಲ್ತಾನ್.
✦ ಬೆಂಗಳೂರಿನ ಲಾಲ್‌ಬಾಗ್‌ನ ಸ್ಥಾಪಕ ಟಿಪ್ಪು ಸುಲ್ತಾನ್.
✦ ಮರಾಠರು ನೂಕಲು ಯತ್ನಿಸಿದ ಹಿಂದೂಗಳ ಪವಿತ್ರ ಸ್ಥಳ ಶೃಂಗೇರಿಯ ಶಾರದ ಪೀಠವನ್ನು ಕಾಪಾಡಿದ ಭದ್ರ ಕಾವಲುಗಾರ ಟಿಪ್ಪು ಸುಲ್ತಾನ್.
✦ ಮಹಿಳೆಯರ ಮೇಲೆ ದೌರ್ಜನ್ಯ ಮಾಡಿದ ಕಾರಣಕ್ಕಾಗಿ, ತನ್ನ ತಂದೆಯ ಸೈನ್ಯದ ಮುಖ್ಯಸ್ಥ ಮಕ್ಬುಲ್ ಅಹ್ಮದ್‌ರನ್ನು ಕಠೋರ ಶಿಕ್ಷೆಗೆ ಗುರಿಪಡಿಸಿದ ಸಾಮಾನ್ಯ ನೀತಿ ಪಾಲಕ ಟಿಪ್ಪು ಸುಲ್ತಾನ್.
✦ ಒಡಲ ಕುಡಿಗಳನ್ನೇ ಬ್ರಿಟೀಷರಿಗೆ ಅಡವಿಟ್ಟ ಕನ್ನಡದ ಯೋಧ, ಸದಾ ಸುದ್ದಿಯಲ್ಲಿರುವ ತಾಕತ್ತಿರುವ ಹೆಸರು ಟಿಪ್ಪು ಸುಲ್ತಾನ್.
✦ ರೇಷ್ಮೆ ನೂಲನ್ನು ನಾಡಿಗೆ ತೊಡಿಸಿದ ದೊರೆ ಟಿಪ್ಪು ಸುಲ್ತಾನ್.

ಯಾರನ್ನೂ ದೂಷಿಸಬೇಡಿ ಇದು ಕನ್ನಡಮ್ಮನ ದೇಗುಲ...
ಯಾರನ್ನೂ ದ್ವೇಷಿಸಬೇಡ ಇದು ಕನ್ನಡಮ್ಮನ ಗೋಕುಲ...
ಒಂದೇ ತಾಯಿಯ ಮಕ್ಕಳು, ನಾವೊಂದೇ ಮಣ್ಣಿನ ಮಕ್ಕಳು...
ನಮ್ಮ ಕನ್ನಡಮ್ಮನ ಎದೆಯೊಳಗೆ...
ಮುಕ್ಕೋಟಿ ದೈವವಿದೆ ಪ್ರತಿ ಗಳಿಗೆ...

✦ ಕರ್ನಾಟಕದ ಕನ್ನಡದ ಸಂಪತ್ತನ್ನು ಕಸಿಯಲು ಬಂದ ಬ್ರಿಟೀಷ್ ಖದೀಮರಿಗೆ ಖಡ್ಗವನ್ನು ಝಳಪಿಸಿ ಉತ್ತರ ಕೊಟ್ಟ ಕನ್ನಡ ಮಾತೆಯ ಧೀರ ಪುರುಷ ಟಿಪ್ಪು ಸುಲ್ತಾನ್.
✦ ತನ್ನ ಮಂತ್ರಿಮಂಡಲದ ಎಲ್ಲಾ ಪ್ರಮುಖ ಹುದ್ದೆಗಳನ್ನು ಸಹಧರ್ಮೀಯರಿಗೆ ಹಂಚಿ ಸೌಹಾರ್ದತೆ ಮೆರೆದ ಐಕ್ಯತೆಯ ಪ್ರಭು ಟಿಪ್ಪು ಸುಲ್ತಾನ್.
✦ ಮದ್ಯಪಾನ ನಿಷೇಧಿಸಿ, ರಾಜ್ಯ ಬೊಕ್ಕಸಕ್ಕೆ ಅಪಾರ ನಷ್ಟವಾದಾಗ ತೆರಿಗೆ ಸಂಗ್ರಹಕ್ಕಿಂತ ರಾಜ್ಯದ ಜನರ ಆರೋಗ್ಯ ಮುಖ್ಯವೆಂದು ಹೇಳಿದ ಜನರ ಹಿತ ಕಾಪಾಡಿದ ಅಪ್ಪಟ ಜನಸ್ನೇಹಿ ಟಿಪ್ಪು ಸುಲ್ತಾನ್.
✦ ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದಲ್ಲಿ ಪಂಚಲಿಂಗ ಸ್ಥಾಪನೆ ಮಾಡಿದ ದೊರೆ ಟಿಪ್ಪು ಸುಲ್ತಾನ್.
✦ ಚರಿತ್ರೆಯಲ್ಲಿ ಮೊಟ್ಟ ಮೊದಲ ಬಾರಿಗೆ ರೈತರಿಗೆ ಭೂಮಿಯ ಒಡೆತನದ ಹಕ್ಕನ್ನು ಕೊಟ್ಟ ಸುಲ್ತಾನ್ ಟಿಪ್ಪು ಸುಲ್ತಾನ್.
✦ ಕನ್ನಂಬಾಡಿ ಅಣೆಕಟ್ಟೆಗೆ ನೀಲನಕ್ಷೆಯನ್ನು ಸಿದ್ಧಪಡಿಸಿದ ಅಭಿವೃದ್ಧಿಯ ಹರಿಕಾರ ಟಿಪ್ಪು ಸುಲ್ತಾನ್.
✦ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿ ಹೋರಾಡುತ್ತಲೇ ಮರಣ ಹೊಂದಿದ ಟಿಪ್ಪು ಸುಲ್ತಾನ್ ಕುರಿತು ಇಂದು ಅಪಸ್ವರವೇ?
✦ ಚರಿತ್ರೆಯ ಸತ್ಯವನ್ನು ಮುಚ್ಚಿಡಲು ಸಾಧ್ಯವೇ?
✦ ಸುಳ್ಳು ಹೇಳಿದರೆ ಟಿಪ್ಪುವಿನ ವ್ಯಕ್ತಿತ್ವ ಮಾಯವಾಗುವುದೇ?

ಎಂಬ ಮಾತನ್ನು ತಿಳಿಸುತ್ತಾ, ಟಿಪ್ಪುವಿನ ಜಯಂತಿಯ ಹಾರ್ದಿಕ ಶುಭಾಶಯಗಳು.

**ಸ್ವತಂತ್ರ ಭಾರತದ ಕನಸಿನ ಸುಲ್ತಾನ್ ಇದೋ ನಿಮಗಿದು ಲಾಖೊಂ ಸಲಾಂ**



**ಟಾರ್ಗೆಟ್ ಮಹಮ್ಮದ್ ಅಸ್ಲಂ**
ಸಂಸ್ಥಾಪಕ ರಾಜ್ಯಾಧ್ಯಕ್ಷರು,
ಸುವರ್ಣ ಕರ್ನಾಟಕ
ಹಿತರಕ್ಷಣಾ ವೇದಿಕೆ

**ಪ್ರಕಟಣೆ**



**ಯಾಕೂಬ್ ಕೊಟ್ಟೂರು**
ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ,
ಸುವರ್ಣ ಕರ್ನಾಟಕ
ಹಿತರಕ್ಷಣಾ ವೇದಿಕೆ

## ತೊಗಲೇರಿ : ಅಂಗನವಾಡಿ ಪುನರಾರಂಭ



ದಾವಣಗೆರೆ, ನ.9- ತಾಲ್ಲೂಕಿನ ಚಿಕ್ಕತೊಗಲೇರಿಯಲ್ಲಿನ ಅಂಗನವಾಡಿ ಕೇಂದ್ರದ ಪುನರಾರಂಭ ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಕೆ.ಹೆಚ್. ವಿಜಯ್ ಕುಮಾರ್ ಮತ್ತಿತರೆ ಅಧಿಕಾರಿಗಳು, ಗ್ರಾಮಸ್ಥರು ಪಾಲ್ಗೊಂಡಿದ್ದರು.

# ರಾಜ್ಯ ಯುವ ನೀತಿ ಸಮಿತಿ ಸದಸ್ಯರ ಆಯ್ಕೆ ರದ್ದುಗೊಳಿಸಲು ಆಗ್ರಹ

ದಾವಣಗೆರೆ, ನ.9- ರಾಜ್ಯ ಯುವ ನೀತಿ ಸಮಿತಿಯ ಸದಸ್ಯರ ಆಯ್ಕೆ ರಾಜಕೀಯ ಪ್ರೇರಿತವಾಗಿದ್ದು, ಕೂಡಲೇ ಅದನ್ನು ರದ್ದುಗೊಳಿಸಿ, ಯುವ ಜನರ ಭವಿಷ್ಯದ ದೃಷ್ಟಿಯಿಂದ ಶಿಕ್ಷಣ, ಕ್ರೀಡೆ ಹಾಗೂ ಯುವ ಜನರ ಮೇಲೆ ಪ್ರಭಾವ ಬೀರುವ ಕ್ಷೇತ್ರಗಳಲ್ಲಿನ ತಜ್ಞರ ಸಮಿತಿಯನ್ನು ಆಯ್ಕೆ ಮಾಡುವಂತೆ ಒತ್ತಾಯಿಸಿ, ಅಖಿಲ ಭಾರತ ಯುವಜನ ಫೆಡರೇಷನ್ (ಎಐವೈಎಫ್) ಜಿಲ್ಲಾ ಸಮಿತಿಯಿಂದ ನಗರದಲ್ಲಿ ನಿನ್ನೆ ಪ್ರತಿಭಟನೆ ನಡೆಸಲಾಯಿತು.

ಉಪವಿಭಾಗಾಧಿಕಾರಿ ಕಚೇರಿ ಮುಂಭಾಗದಲ್ಲಿ ಫೆಡರೇಷನ್ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಹಾಗೂ ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು ನೇತೃತ್ವದಲ್ಲಿ ಜಮಾಯಿಸಿದ್ದ ಪದಾಧಿಕಾರಿಗಳು, ಉಪವಿಭಾಗಾಧಿಕಾರಿ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರ ರಾಜ್ಯದಲ್ಲಿ ಯುವ ನೀತಿಯೊಂದನ್ನು ಜಾರಿಗೆ ತರಲು ಇಚ್ಛಿಸಿರುವುದು ಶ್ಲಾಘನೀಯ.

ಆದರೆ, ಈ ನೀತಿಯ ರೂಪು-ರೇಷೆ ರಚಿಸಲು ಆಯ್ಕೆ ಮಾಡಿರುವ 13 ಜನ ಸಮಿತಿಯ ಸದಸ್ಯರಲ್ಲಿ ಸರ್ಕಾರಿ ವಲಯದ ಅಧಿಕಾರಿಗಳನ್ನು ಬಿಟ್ಟು, ಉಳಿದವರ ಆಯ್ಕೆ ಸಂಪೂರ್ಣ ರಾಜಕೀಯ ಪ್ರೇರಿತವಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.




**ಎಐವೈಎಫ್ ಪ್ರತಿಭಟನೆ**

ಯುವ ನೀತಿ ಸಮಿತಿಯು ಶಿಕ್ಷಣ, ಉದ್ಯೋಗ, ಕ್ರೀಡೆ ಹಾಗೂ ಮುಂತಾದ ಯುವಜನರ ಮೇಲೆ ಪ್ರಭಾವ ಬೀರುವ ಕ್ಷೇತ್ರಗಳಲ್ಲಿ ವಿಶೇಷ ಅನುಭವವುಳ್ಳ ತಜ್ಞರನ್ನು ಆಯ್ಕೆ ಮಾಡಬೇಕೇ ವಿನಃ ರಾಜ್ಯ ಸರ್ಕಾರ ತನ್ನ ಪಕ್ಷವನ್ನು ಮೆಚ್ಚಿಸಲು ಯಾವ ಅನುಭವವೂ ಇಲ್ಲದ ಹಾಗೂ ರಾಜ್ಯದ ಯುವಜನರಲ್ಲಿ ಕೋಮುವಾದದ ಮನೋಭಾವ ಬಿತ್ತಿ ರಾಜ್ಯದ ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆಯಾಗುವಂತಹ ವ್ಯಕ್ತಿಗಳನ್ನು ಆಯ್ಕೆ ಮಾಡಿರುವುದು ಖಂಡನೀಯ ಎಂದು ಆಕ್ಷೇಪಿಸಿದರು.

ಪ್ರತಿಭಟನೆಯಲ್ಲಿ ಎ. ತಿಪ್ಪೇಶಿ, ಜೀವನ್ ನಿಟುವಳ್ಳಿ, ದಾದಾಪೀರ್, ಇರ್ಫಾನ್, ಇಬ್ರಾಹಿಂ, ಹನುಮಂತಪ್ಪ, ಮಂಜುನಾಥ ಹರಳಯ್ಯ, ಸುದೇಶ್ ಮಳಲಕೆರೆ, ಅಂಜಿನಪ್ಪ ಮಳಲಕೆರೆ, ಮಂಜುನಾಥ ಮಳಲಕೆರೆ, ಇರ್ಫಾನ್ ಅಹ್ಮದ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಪುರಸ್ಕಾರ



**ಹರಪನಹಳ್ಳಿ**

ಹರಪನಹಳ್ಳಿ, ನ.8 - ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕು ಘಟಕದ ವತಿಯಿಂದ ಪಟ್ಟಣದ ಶಾದಿಮಹಲ್‌ನಲ್ಲಿ ನಿವೃತ್ತ ಮುಸ್ಲಿಂ ನೌಕರರಿಗೆ ಹಾಗೂ ಎಸ್.ಎಸ್.ಎಲ್.ಸಿ. ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕೆ.ಎಸ್ ಉಸ್ಮಾನ್ ವಹಿಸಿದ್ದರು. ಅಂಜುಮನ್ ಅಧ್ಯಕ್ಷ ಡಿ.ಮುಜೀಬುರ್ ರಹಿಮಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ವೇಳೆ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಮುಸ್ಲಿಮರ ಪಾತ್ರ ಕುರಿತು ಶಿಕ್ಷಕರಾದ ಮಮ್ತಾಜ್ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಸವರಾಜ ಸಂಗಪ್ಪನವರಿಗೆ ಗೌರವಿಸಿ ಸನ್ಮಾನಿಸಲಾಯಿತು.

ಈ ವೇಳೆ ಜಿಲ್ಲಾ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ದಾದಾ ಖಲಂದರ್, ಖಜಾಂಚಿ ಷರೀಫ್ ಮಕರಬ್ಬಿ, ಸಂಘಟನಾ ಕಾರ್ಯದರ್ಶಿ ಮಮ್ತಾಜ್, ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಂಸ್ಥಾಪಕ ಅಧ್ಯಕ್ಷ ಸಲೀಮ್ ಹಂಚಿನ ಮನೆ, ಕಾರ್ಯದರ್ಶಿ ಡಾ.ಸಯ್ಯದ್ ಇಸ್ಮಾಯಿಲ್, ಸಂಘದ ಎನ್. ಇಸ್ಮಾಯಿಲ್, ಅಸ್ಲಾಂ ಭಾಷಾ, ಹೆಚ್. ಸಲಿಂ, ರಫೀಕ್ ರಿಜ್ವಿ, ಕೆ.ಮನ್ಸೂರ್, ಅರ್ಜುಮುನ್ನೀಸಾ, ಎಂ.ಯಾಹ್ಯಾ ಎಸ್.ಶಫಿ, ಮಹಬೂಬ್ ಬಡಿಗಿ, ಅಬ್ದುಲ್ ಸಲಾಮ್, ಅಲೀಂ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಕೆ.ಸಿದ್ದಲಿಂಗನಗೌಡ, ಬಿ.ಆರ್.ಸಿ ಹುಸೇನ್ ಪೀರ್, ಶಿಕ್ಷಕರಾದ ಚಮನ್‌ಬಿ, ಮಾದಿಹಳ್ಳಿ ಮಂಜುನಾಥ, ಹಡಗಲಿಯ ಮುಸ್ತಾಫ್ ಸೇರಿದಂತೆ ಇತರರಿದ್ದರು.

## ಕೇರಳ ಕಲಾಕುಂಚ ಅಧ್ಯಕ್ಷರಾಗಿ ಜಯಲಕ್ಷ್ಮಿ ಕಾರಂತ

ದಾವಣಗೆರೆ, ನ.9- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಕೇರಳ ಶಾಖೆಯ ಅಧ್ಯಕ್ಷರಾಗಿ ಜಯಲಕ್ಷ್ಮಿ ಕಾರಂತ ಆಯ್ಕೆಯಾಗಿದ್ದಾರೆ ಎಂದು ಕಲಾಕುಂಚ ಸಂಸ್ಥಾಪಕ ಗಣೇಶ್ ಶೆಣೈ ತಿಳಿಸಿದ್ದಾರೆ.

ಕಾಸರಗೋಡು ಜಿಲ್ಲೆಯ ಮಂಗಲ್ಪಾಡಿಯ ಹಿರಿಯ ಯಕ್ಷಗಾನ ವಿದ್ವಾಂಸರು, ಸಾಹಿತಿಗಳೂ ಆದ ಮಹಿಳಾ ಸಾಧಕಿ ಜಯಲಕ್ಷ್ಮಿ ಕಾರಂತರನ್ನು ಕಲಾಕುಂಚ ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ತಿಳಿಸಿದ್ದಾರೆ.

# ಜಿಗಳಿ ಗ್ರಾ.ಪಂ: 'ಸ್ವಚ್ಛವಾಹಿನಿ' ಸಮರ್ಪಣೆ



ಮಲೇಬೆನ್ನೂರು, ನ.9- ಜಿಗಳಿ ಗ್ರಾಮ ಪಂಚಾಯಿತಿಗೆ ಹೊಸದಾಗಿ ಬಂದಿರುವ 'ಸ್ವಚ್ಛವಾಹಿನಿ' ವಾಹನವನ್ನು ಸೋಮವಾರ ಗ್ರಾ.ಪಂ. ಅಧ್ಯಕ್ಷರಾದ ಆಶಾ ಅಣ್ಣಪ್ಪ ಅವರು ಪೂಜೆ ಮಾಡುವ ಮೂಲಕ ಸಾರ್ವಜನಿಕ ಸೇವೆಗೆ ಸಮರ್ಪಿಸಿದರು.

ಈ ವಾಹನವು ಜಿಗಳಿ, ಜಿ.ಬೇವಿನಹಳ್ಳಿ ಮತ್ತು ಒಡೆಯರ ಬಸಾಪುರ ಗ್ರಾಮಗಳಲ್ಲಿ ಪ್ರತಿನಿತ್ಯ ಸಂಚರಿಸಿ ಮನೆ-ಮನೆಗಳಿಂದ ಕಸವನ್ನು ಸಂಗ್ರಹಿಸಿ ಘನ ತ್ಯಾಜ್ಯ ಘಟಕಕ್ಕೆ ವಿಲೇವಾರಿ ಮಾಡುತ್ತದೆ ಎಂದು ಪಿಡಿಓ ಉಮೇಶ್ ಮಾಹಿತಿ ನೀಡಿದರು.

ಈ ವಾಹನಕ್ಕಾಗಿ 14 ಮತ್ತು 15ನೇ ಹಣಕಾಸು ಯೋಜನೆಯಲ್ಲಿ ಸುಮಾರು 2 ಲಕ್ಷ ರೂ. ಮತ್ತು ಜಿ.ಪಂ.ನಿಂದ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ 3.30 ಲಕ್ಷ ರೂ.ನೀಡಲಾಗಿದೆ ಎಂದು ಉಮೇಶ್ ತಿಳಿಸಿದರು.

ಗ್ರಾ.ಪಂ. ಉಪಾಧ್ಯಕ್ಷ ಮಲ್ಲನಗೌಡ, ಸದಸ್ಯರಾದ ಡಿ. ಎಂ.ಹರೀಶ್, ಕೆ.ಜಿ.ಬಸವರಾಜ್, ವೈ.ಆರ್. ಚೇತನ್ ಕುಮಾರ್, ಕರಿಯಮ್ಮ ವಿನೋದ ಹಾಲೇಶ್ ಕುಮಾರ್, ರೇಣುಕಾ ನಾಗರಾಜ್, ಮಂಜುಳ ಪರಮೇಶ್ವರಪ್ಪ ಮತ್ತು ಜಿ.ಬೇವಿನಹಳ್ಳಿಯ ರೂಪಾ ಸೋಮಶೇಖರ್, ದೇವರಾಜ್, ಕಾರ್ಯದರ್ಶಿ ಶೇಖರ್ ನಾಯ್ಕ, ಬಿ. ದಾನಪ್ಪ, ಬಿ.ಮೌನೇಶ್ ಮತ್ತಿತರರು ಉಪಸ್ಥಿತರಿದ್ದರು.

# ಪುನೀತ್ ಅಭಿಮಾನಿಗಳಿಂದ ವಿವಿಧೆಡೆ ಅನ್ನ ಸಂತರ್ಪಣೆ




ದಾವಣಗೆರೆ, ನ.9- ಪುನೀತ್ ರಾಜಕುಮಾರ್ ಪುಣ್ಯತಿಥಿ ಅಂಗವಾಗಿ ನಗರದ ವಿವಿಧೆಡೆ ಇಂದು ಪುನೀತ್ ಅಭಿಮಾನಿಗಳು ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಮಾಡುವ ಮುಖೇನ ಅಗಲಿದ ನೆಚ್ಚಿನ ನಟನನ್ನು ಸ್ಮರಿಸಿದ್ದಾರೆ.

ಕೆಟಿಜೆ ನಗರ 15ನೇ ಕ್ರಾಸ್‌ನಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಫ್ರೆಂಡ್ಸ್ ಗ್ರೂಪ್‌ನಿಂದ ಸಾರ್ವಜನಿಕರಿಗೆ ಅನ್ನ ದಾಸೋಹ ಕಾರ್ಯ ನಡೆಯಿತು.

ವರನಟ ಡಾ. ರಾಜಕುಮಾರ್ ಹಾಗೂ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ತಮ್ಮ ಅಭಿಮಾನ ಮೆರೆದರು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಆನಂದರಾಜ, ಜಗನ್ನಾಥ, ವೆಂಕಟೇಶ, ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್, ಬಿಜೆಪಿ ಮುಖಂಡ ಅಕ್ಕಿ ಪ್ರಭು ಕಲ್ಬುರ್ಗಿ, ಕಾಂಗ್ರೆಸ್ ಯುವ ಮುಖಂಡ ಚೈತನ್ಯ ಕುಮಾರ್ ಮೇಸಿ, ಪತ್ರಕರ್ತ ನಾಗರಾಜ ಬಡದಾಳ್, ರಾಜು ರೇಡಿಯಂ, ಕಾರ್ತಿಕ್, ನಾಗರಾಜ, ಸತ್ಯಣ್ಣ, ಮನು, ಅಜ್ಜಯ್ಯ, ಸಂತೋಷ, ಮಂಜಪ್ಪ, ಚಂದ್ರು ಕ್ಯಾಂಟೀನ್, ದೌಲತ್ ರಾವ್, ಪ್ರಕಾಶ, ಸುರೇಶ, ರಘು, ಸಾಲೇಶ್ವರ, ಪರಮೇಶಿ ಸೇರಿದಂತೆ ಇತರರಿದ್ದರು.

ಅಂತೆಯೇ ನಗರದ ಆರ್ ಟಿಓ ಕಚೇರಿ ಸಮೀಪದಲ್ಲಿ ಶಂಕರ್ ಎಂಬ ಪುನೀತ್ ಅಭಿಮಾನಿ ಸಾರ್ವಜನಿಕರಿಗೆ ಕೇಸರಿ ಬಾತ್ ನೀಡುವ ಮೂಲಕ ಸ್ಮರಿಸಿದರು. ಈರುಳ್ಳಿ ಮಾರುಕಟ್ಟೆ, ಜಯದೇವ ವೃತ್ತ ಸೇರಿದಂತೆ ವಿವಿಧೆಡೆ ಪುನೀತ್ ಅಭಿಮಾನಿಗಳು ಅನ್ನ ಸಂತರ್ಪಣೆ ಏರ್ಪಡಿಸಿದ್ದರು.

## ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಕರಾವಳಿ ಜಿಲ್ಲೆಗಳ ಸಾಧಕರ ಕಡೆಗಣನೆ

ದಾವಣಗೆರೆ, ನ. 9- ರಾಜ್ಯ ಸರ್ಕಾರ ರಾಜ್ಯೋತ್ಸವದ ಅಂಗವಾಗಿ ನೀಡುವ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಲ್ಲಿ ಈ ಬಾರಿ ಕರಾವಳಿ ಜಿಲ್ಲೆಗಳ ಸಾಧಕರನ್ನು ಕಡೆಗಣಿಸಿದ್ದು ದುರಂತ ಎಂದು ಹವ್ಯಾಸಿ ಯಕ್ಷಗಾನ ಕಲಾವಿದ ಸಾಲಿಗ್ರಾಮ ಗಣೇಶ್ ಶೆಣೈ ಬೇಸರ ವ್ಯಕ್ತಪಡಿಸಿದ್ದಾರೆ.

ಅಪ್ಪಟ ಜಾನಪದ ಗಂಡುಕಲೆ, ಆರಾಧನಾ ದೈವೀಕಲೆ ಯಕ್ಷಗಾನವನ್ನು ಹುಟ್ಟುಹಾಕಿ ವೈಭವೀಕರಿಸಿದ ಕರ್ನಾಟಕ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅನೇಕ ಹಿರಿಯ ವಿದ್ವಾಂಸರು, ಸಾಧಕರು ಇದ್ದು ಕನಿಷ್ಟ ಮೂರು ಜಿಲ್ಲೆಗಳಲ್ಲಿ ಯಾವುದಾದರೂ ಒಂದು ಜಿಲ್ಲೆಗೆ ಪ್ರಾಮುಖ್ಯತೆ ಕೊಟ್ಟು ಪ್ರಶಸ್ತಿ ಘೋಷಿಸಿದ್ದರೆ ಸರ್ಕಾರದ ಘನತೆ, ಗೌರವ ಹೆಚ್ಚುತ್ತಿತ್ತು ಎಂದಿದ್ದಾರೆ.

## ಮೊಬೈಲ್ ರಿಪೇರಿ ತರಬೇತಿ

ದಾವಣಗೆರೆ, ನ.9- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಹಾಗೂ ಜಿಲ್ಲಾ ಪಂಚಾಯ್ತಿ ಸಂಯುಕ್ತಾಶ್ರಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಭಾಗದ ಯುವಕ, ಯುವತಿಯರಿಗಾಗಿ ಇದೇ ದಿನಾಂಕ 16 ರಿಂದ 30 ದಿನಗಳ ಅವಧಿಯ ಮೊಬೈಲ್ ರಿಪೇರಿ ತರಬೇತಿ ಹಮ್ಮಿಕೊಳ್ಳಲಾಗಿದೆ. 18 ರಿಂದ 45 ವರ್ಷದೊಳಗಿನ ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳು ನೇರವಾಗಿ ತರಬೇತಿ ಸಂಸ್ಥೆಗೆ ಭೇಟಿ ನೀಡಿ ಅಥವಾ ಮೊ: 7975139332, 996411131 ಮುಖಾಂತರ ಹೆಸರು ನೋಂದಾಯಿಸಬಹುದು.

## ಚೌಡೇಶ್ವರಿ ದೇವಸ್ಥಾನದಲ್ಲಿ ಗೋ ಪೂಜೆ



**ರಾಣೇಬೆನ್ನೂರು**

ರಾಣೇಬೆನ್ನೂರು, ನ.9- ನಗರದ ಚೌಡೇಶ್ವರಿ ದೇವಸ್ಥಾನದಲ್ಲಿ ಶುಕ್ರವಾರ ಗೋಧೂಳಿ ಸಮಯದಲ್ಲಿ ಗೋ ಪೂಜೆ ನಡೆಸಲಾಯಿತು. ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ನಗರಸಭೆಯಿಂದ ಆಯೋಜಿಸಿದ್ದ ಗೋ ಪೂಜೆಯಲ್ಲಿ ಶಾಸಕ ಅರುಣಕುಮಾರ ಪೂಜಾರ ಪಾಲ್ಗೊಂಡು ಗೋ ಪೂಜೆ ನೆರವೇರಿಸಿದರು.

ನಗರಸಭೆ ಅಧ್ಯಕ್ಷರಾದ ರೂಪಾ ಚಿನ್ನಿಕಟ್ಟಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ನಗರಸಭೆ ಉಪಾಧ್ಯಕ್ಷೆ ಕಸ್ತೂರಮ್ಮ ಚಿಕ್ಕಬಿದರಿ, ಸದಸ್ಯೆ ಪ್ರಭಾವತಿ ತಿಳವಳ್ಳಿ, ನಗರಸಭೆ ಆಯುಕ್ತ ಟಿ. ಉದಯಕುಮಾರ್, ಸಹಾಯಕ ನಿರ್ದೇಶಕ ಡಾ. ಪರಮೇಶ ಎನ್. ಹುಬ್ಬಳ್ಳಿ, ಮುಖ್ಯ ಪಶುವೈದ್ಯಾಧಿಕಾರಿ ಡಾ. ನೀಲಕಂಠ ಅಂಗಡಿ, ಪವನ ಮಲ್ಲಾಡದ, ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಹಾಲೇಶ ಆರ್. ನಾಯಕ, ಗ್ರಾಮಲೆಕ್ಕಾಧಿಕಾರಿ ಅಶೋಕ ಅರಳೇಶ್ವರ, ರಾಜು ರಾಣೇಬೆನ್ನೂರ, ರಾಘವೇಂದ್ರ ಭಜಂತ್ರಿ ಇನ್ನಿತರರಿದ್ದರು.


**ಬಟ್ಟೆ ಅಂಗಡಿ ಮಾರುವುದಿದೆ**
ಸುಸಜ್ಜಿತವಾದ ಹಾಲಿ ನಡೆಯುತ್ತಿರುವ ಮಹಿಳೆಯರ ಸೀರೆಗಳು, ಕುರ್ತಿಸ್, ಡ್ರೆಸ್ ಮೆಟೀರಿಯಲ್ಸ್ ಇರುವ ಬಟ್ಟೆ ಅಂಗಡಿ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99023 76642

**WANTED**
Boys and Girls required for billing & data entry work at Food Mart Supermarket, MCC B' Block.
Qualification: B.Com
Mob: 98864 63531

**ಬೇಕಾಗಿದ್ದಾರೆ**
XEROX ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Computer ಜ್ಞಾನವುಳ್ಳವರಿಗೆ ಆದ್ಯತೆ. Ram and Circle ಹತ್ತಿರ.
70221 58935

**ಬೇಕಾಗಿದ್ದಾರೆ**
ಗಿಫ್ಟ್ ಶಾಪ್‌ನಲ್ಲಿ ಸೇಲ್ಸ್‌ಗರ್ಲ್ಸ್ ಆಗಿ ಕೆಲಸ ಮಾಡಲು ಪಿಯುಸಿ ಆಗಿರುವ ಹುಡುಗಿಯರು ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**WANTED**
PUC Passed Lady Teacher Wanted and for Day - Care and Pre-School.
94825 44828

**ಸೈಟು ಮಾರಾಟಕ್ಕಿದೆ**
30×50 ಹಳೆ ಬನಶಂಕರಿ ಬಡಾವಣೆ ಪಶ್ಚಿಮ ದಿಕ್ಕು, 30×50 ಡಾಲರ್ಸ್ ಕಾಲೋನಿ ದಕ್ಷಿಣ ದಿಕ್ಕು.
98867 88997

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಒಂದೂವರೆ ವರ್ಷದ ಮಗು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ
98808 12989

**ರೂಂಗಳು ಬಾಡಿಗೆಗೆ**
ದಾವಣಗೆರೆ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್‌ನಲ್ಲಿ ಬೋರ್, ನಲ್ಲಿ ನೀರಿನ ಹಾಗೂ ಬಿಸಿ ನೀರಿನ ವ್ಯವಸ್ಥೆ ಹಾಗೂ ಅಟ್ಯಾಚ್ಡ್ ಬಾತ್ ರೂಂ ಇರುವ ಸುಸಜ್ಜಿತ ರೂಂಗಳು ಬಾಡಿಗೆಗೆ ಇವೆ. ವಿಚಾರಿಸಿ
ಮೊ: 73382 45337

**ಮನೆ ಬೇಕಾಗಿದೆ**
4 ಬೆಡ್ ರೂಂ ಮತ್ತು ಫರ್ನೀಚರ್ಸ್ ಹೊಂದಿರುವ ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಬೇಕಾಗಿದೆ. ಸಂಪರ್ಕಿಸಿ :
78996 83444
77956 44408

NGO- ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, Trust Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ
MEGHANA ASSOCIATES (R)
99809 16126

**ಕೆಲಸಗಾರರು ಬೇಕಾಗಿದ್ದಾರೆ**
ಅಡೋಬ್ ಫೋಟೋಶಾಪ್ ಮತ್ತು ಫೋಟೋ ಸ್ಟುಡಿಯೋದಲ್ಲಿ ಅನುಭವವಿರುವ ಯುವಕ-ಯುವತಿಯರು ಬೇಕಾಗಿದ್ದಾರೆ.
ಶ್ರೀ ಮಾರುತಿ ಕಲರ್ ಲ್ಯಾಬ್ ಮತ್ತು ಸ್ಟುಡಿಯೋ
ಅಶೋಕ ರಸ್ತೆ, ದಾವಣಗೆರೆ.
98440 65970

**ಸೈಟುಗಳು ಮಾರಾಟಕ್ಕಿವೆ.**
ಆಂಜನೇಯ ಬಡಾವಣೆ 40x60 ಪೂರ್ವ
ಆಂಜನೇಯ ಬಡಾವಣೆ 30x50 ಉತ್ತರ
ಎಸ್. ಎಸ್. ಲೇಔಟ್ 40x60 ಉತ್ತರ
ಎಮ್.ಸಿ.ಸಿ'ಬಿ' ಬ್ಲಾಕ್ 40x60 ಪೂರ್ವ
ಎಮ್.ಸಿ.ಸಿ'ಬಿ' ಬ್ಲಾಕ್ 40x60 ಪೂರ್ವ
ಎಮ್.ಸಿ.ಸಿ'ಬಿ' ಬ್ಲಾಕ್ 30x40 ಪೂರ್ವ
ರಿಯಲ್ ಎಸ್ಟೇಟ್ ಏಜೆಂಟ್ :
ಪ್ರಶಾಂತ್ - 9972670257

**ಮನೆಗಳು ಬಾಡಿಗೆಗೆ**
2 ಸಿಂಗಲ್ ಬೆಡ್‌ರೂಂ ಮನೆ ಮತ್ತು 1 ಡಬಲ್ ಬೆಡ್‌ರೂಂ ಮನೆ ಇದೆ, 1st Floor ನಲ್ಲಿ ಉತ್ತರ ಫೇಸ್ ಮುಖಕ್ಕೆ ಇವೆ (North Face). ಲೀಸ್‌ಗೆ ಮತ್ತು ಬಾಡಿಗೆಗೆ. ಬಾಟ್ಲಿ ಬಿಲ್ಡಿಂಗ್ ಹಿಂಭಾಗದಲ್ಲಿ ದೊರೆಯುತ್ತವೆ. ವಾಸ್ತು ಪ್ರಕಾರ ಇವೆ.
99027 01968, 98867 19998

**ಕೆಲಸಕ್ಕೆ ಬೇಕಾಗಿದ್ದಾರೆ**
18-30 ವಯಸ್ಸಿನ ಅನುಭವವುಳ್ಳ ಯುವಕರು ಅಂಗಡಿ ಕೆಲಸಕ್ಕೆ ತಕ್ಷಣವೇ ಬೇಕಾಗಿದ್ದಾರೆ. ಸಂಪರ್ಕಿಸಿ
ಧನಲಕ್ಷ್ಮಿ ಕಿರಾಣಿ ಸ್ಟೋರ್
ವಸಂತ ಟಾಕೀಸ್ ರಸ್ತೆ, ದಾವಣಗೆರೆ.
ಮೊ: 93525 46144

**ಗಾಡಿ ಬಾಡಿಗೆಗೆ**
ಏಜೆನ್ಸಿಗೆ ಅನುಕೂಲವಾಗುವ Mahindra Supro ಗಾಡಿಯು ಲೋಕಲ್ ಡ್ರೈವರ್‌ಗಳಿಗೆ ಬಾಡಿಗೆಗೆ ಕೊಡುತ್ತಿದ್ದೇವೆ ಆಸಕ್ತರು ಕೂಡಲೇ ಸಂಪರ್ಕಿಸಿ
87110 04905

**ಹಾಲ್/ಸಿಂಗಲ್ ಬೆಡ್ ರೂಂ ಹೌಸ್ ಬಾಡಿಗೆಗೆ ಇದೆ**
1ನೇ ಫ್ಲೋರ್ ನಲ್ಲಿ ಹಾಲ್ ಇದೆ ಹಾಗೂ 2ನೇ ಫ್ಲೋರ್ ನಲ್ಲಿ ಸಿಂಗಲ್ ಬೆಡ್ ರೂಂ ಇದೆ. ನರಸರಾಜ್ ರೋಡ್, ಗ್ಲಾಸ್ ಬಿಲ್ಡಿಂಗ್ ಎದುರು, ದಾವಣಗೆರೆ
80504 07799
98804 85868

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಜ್‌ಗಿದೆ. ಸಂಪರ್ಕಿಸಿ.
93410 12022

**ಜಮೀನು ಮಾರಾಟಕ್ಕಿದೆ**
ನಿಮಗೆ ಬೇಕಾದ ರೀತಿಯ ಬೆಲೆಯ ಜಮೀನುಗಳು ದೊರೆಯುತ್ತದೆ.
Just make a Call: Sharma
74112 50447

**ಜಮೀನುಗಳು ಮಾರಾಟಕ್ಕಿವೆ**
10 ಗುಂಟೆ ಯಿಂದ 25 ಎಕರೆ ವರೆಗೆ @ Rs 5 ಲಕ್ಷದಿಂದ ಶುರು. ಎಲ್ಲಾ ರೀತಿಯ ಜಮೀನುಗಳು ಮಾರಾಟಕ್ಕಿವೆ. ವಿವರಗಳಿಗೆ ಸಂಪರ್ಕಿಸಿ: Sharma
74112 50447

**ಮನೆ ಬಾಡಿಗೆ**
2 ಬೆಡ್ ರೂಂವುಳ್ಳ ಮನೆ ಬಾಡಿಗೆಗೆ Near IDBI Bank, College Road Davangere.
99015 78882

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
ಅಮರಾವತಿ ಹಾಲಪ್ಪ
98454 84076

**Wanted**
PUC/B.com for computer operation, Any degree/PUC/ITI/ diploma for marketing
Call us: 98444 44981

**WANTED**
* SSLC to Degree (Ladies)
* Marketing (Female/ Male)
* Helper
7892328599

**Requirement**
SBI Group Company
Development Manager
Davanagere Branch
Age : 28 to 45
Salary : 20 to 35K
Qualification : Degree (Graduation)
Experience : 2 Years Exp.in Sales
9886139595/9739249595

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿ ಸುಕೃತೀಂದ್ರ ಕಲಾ ಮಂದಿರ ರಸ್ತೆಯಲ್ಲಿ ಎರಡು ಬೆಡ್ ರೂಂನ ಮನೆ ಬಾಡಿಗೆಗೆ ಇದೆ.
ವಿಚಾರಿಸಿ
98448 82366

**ಬೆಂಗಳೂರಿನಲ್ಲಿ ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಗಂಡ, ಹೆಂಡತಿ ಇರುವವರು ಬೇಕು. ಬಟ್ಟೆ, ಪಾತ್ರೆ ನೆಲ, ಬಾತ್ ರೂಂ, ಕ್ಲೀನಿಂಗ್ ಕೆಲಸ. ರೂಂ ಉಚಿತ, ಸಂಬಳ 18000/-
97400 98047, 9740098064

**WANTED**
Required Male Office Assistant
ANDANUR CHITS (R)
Ram & co Circle
Davanagere

**WANTED**
PUC or Any Degree with Basic Computer Knowledge is must and Tele Caller, for Male and Female.
Contact: Excellent Electronics
#2137/1, 4th Main, 3rd Cross, MCC A'Block, Davangere - 577004
Tel No-98865 15100

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

**ಮಣಿಪಾಲ್ ಆರೋಗ್ಯ ಕಾರ್ಡ್**
ರಿನೀವಲ್ ಮಾಡಿಕೊಳ್ಳಲು 15/11/21 ಅಂತಿಮ ದಿನಾಂಕ. ಸಂಪರ್ಕಿಸಿ
ಮಣಿಪಾಲ್ ಮಾಹಿತಿ ಕೇಂದ್ರ
ಕೆ.ಕೆ ಅಸೋಸಿಯೇಟ್ಸ್, ತ್ರಿಶೂಲ್ ಟಾಕೀಸ್ ರಸ್ತೆ, ಕಾವೇರಮ್ಮ ಶಾಲೆ ಹತ್ತಿರ, ದಾವಣಗೆರೆ.
97317 09177, 89042 19373

**Tuitions For**
1st /SSLC/ PCMB/ Commerce/Arts/100% Results With solved notes.
Sinchana Academy
Near RAM & Co Cricle, Davangere
90195 80600
85532 78258

**ಬೇಕಾಗಿದ್ದಾರೆ**
ನಿರುದ್ಯೋಗಿಗಳಿಗೆ ಸುವರ್ಣಾವಕಾಶ. ದಾವಣಗೆರೆ ಜಿಲ್ಲೆಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳೆಯರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
73490 65434, 82177 95375

**WANTED**
Sales Executives (3 yrs)
Manager (5 yrs) (car)
Telecalling (F) (car)
Java-API Developer
SFDC Developer
98444 92888

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 82173 02649

**ಮನೆ ಬಾಡಿಗೆಗಿದೆ**
ಬೋರ್ ಮತ್ತು ನಲ್ಲಿ ನೀರಿನ ಸೌಕರ್ಯವಿರುವ 2 ಬೆಡ್ ರೂಂವುಳ್ಳ ಸುಸಜ್ಜಿತವಾದ ಮೊದಲನೆ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. "ಈರಮ್ಮ ನಿಲಯ" ಎಂ.ಸಿ.ಸಿ 'ಎ' ಬ್ಲಾಕ್, 4ನೇ ಮುಖ್ಯರಸ್ತೆ, ಹಳೇ ಗುರು ಸ್ಕ್ಯಾನಿಂಗ್ ಪಕ್ಕ, ದಾವಣಗೆರೆ. ವಿಚಾರಿಸಿ
98868 25228
98866 53398

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್‌ನಲ್ಲಿ Part Time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯೋಮಿತಿ: 20 ರಿಂದ 28 ವರ್ಷದ ಒಳಗೆ ಇರಬೇಕು. ಸಮಯ: ಸಂಜೆ 4.30 ರಿಂದ
97385 23711

GST Registration- Returns Filing INCOME TAX & GST, CASE, Project Reports and for Accounts Maintenances
Contact
MEGHANA ASSOCIATES (R)
99809 16126

**WANTED**
Anjum First Grade College
B.S. Nagara, Davangere-02.
Requires Lecturers
Political Science-01
Commerce-01
97437 00743
97402 65935

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬರಹಗಾರರು ಬೇಕಾಗಿದ್ದಾರೆ**
ಪದವಿ ಕೋರ್ಸ್‌ಗಳ NEP ಪಠ್ಯಕ್ರಮದಂತೆ ಪಠ್ಯಪುಸ್ತಕಗಳು ಹಾಗೂ ಗೈಡ್‌ಗಳನ್ನು ಬರೆಯುವರು ಬೇಕಾಗಿದ್ದಾರೆ. ಆಸಕ್ತಿ ಇರುವವರು ವಿಚಾರಿಸಿ.
ಚೇತನ್ ಬುಕ್ ಹೌಸ್
80504 07799

**ಬೇಕಾಗಿದ್ದಾರೆ**
ಐಷರ್ ಟ್ರ್ಯಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡಲು ದಾವಣಗೆರೆ, ಹರಿಹರ, ಹರಪನಹಳ್ಳಿಗೆ "ಮಾರಾಟ ಪ್ರತಿನಿಧಿಗಳು" ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವಿರಬೇಕು, ಲೈಸೆನ್ಸ್ ಇರಬೇಕು. ಆಕರ್ಷಕ ಸಂಬಳ+Incentive +TA,DA ಕೊಡಲಾಗುವುದು.
ಸಂಪರ್ಕಿಸಿ :
ಶಾರದಾ ಆಟೋಸ್
KSRTC, ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
ಫೋ.: 63646 76457

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಕೆಲಸಕ್ಕೆ ಬೇಕಾಗಿದ್ದಾರೆ**
ಶಕೀರಾ ಬ್ಯೂಟಿ ಪಾರ್ಲರ್‌ಗೆ ಸಹಾಯಕಿಯರು ಬೇಕಾಗಿದ್ದಾರೆ.
#741/4, 10th Main, P.J. Extension, Davanagere
93420 19013

**100% ನಿಶ್ಚಿತ ಪರಿಹಾರ**
$L_4$-$L_5$ ಸ್ಲಿಪ್ಡ್ ಡಿಸ್ಕ್, ಸೈಯಾಟಿಕಾ, ನರ ಸೆಳೆತ, ಸರ್ವೈಕಲ್ ಸ್ಪಾಂಡಿಲೈಟಿಸ್, ಫ್ರೋಜನ್ ಶೋಲ್ಡರ್, ಆರ್ಥ್ರೈಟಿಸ್
ನ್ಯೂರೋಥೆರಪಿ ವೆಲ್‌ನೆಸ್ ಸೆಂಟರ್
3ನೇ ಮೇನ್, 2ನೇ ಕ್ರಾಸ್, ಎಂ.ಸಿ.ಸಿ. ಬಿ ಬ್ಲಾಕ್, ಸುರಂಭಿ ಹಾಸ್ಪಿಟಲ್ ಹತ್ತಿರ, ದಾವಣಗೆರೆ. ಫೋ.: 99726 00713

ಓಂ ಶ್ರೀ ದತ್ತಾತ್ರೇಯ ಪ॥ ಶ್ರೀರಾಮ್ ಭಟ್
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳನ್ನು ಅರಿತು ಪ್ರಶ್ನೆ ಶಾಸ್ತ್ರದಿಂದ ನಿಮ್ಮ ಕಠಿಣ ಸಮಸ್ಯೆಗಳಿಗೆ 3 ದಿನಗಳ ಪರಿಹಾರ. ನಿಮ್ಮ ಒಂದು ದಿವ್ಯ ಕರೆ ನಿಮ್ಮ ಜೀವನವನ್ನು ಬದಲಿಸುತ್ತದೆ. ದೂರವಾಣಿ ಮೂಲಕ ಇಂದೇ ಕರೆ ಮಾಡಿ ಮೊ. 98862 30791

**Q-JOBS**
S.S.L.C., PUC., B.A., B.Com., B.B.M., BSc., B.Ed., etc
ಹುಡುಗರಿಗೆ & ಹುಡುಗಿಯರಿಗೆ ನಿಮಗೆ ಬೇಕಾಗಿರುವ ಕೆಲಸದ ಬಗ್ಗೆ ಮಾಹಿತಿ ಸಿಗುತ್ತದೆ. ಸಂಪರ್ಕಿಸಿ :
76250 89210

**Wanted teachers immediately**
(primary section)
02 Post..BA B.Ed, B.sc B.Ed.BA.D.Ed
SJM Higher Primary school
Virakthmath, Doddapet, Davangere
Contact 99649 70221

# ಕೊಠಡಿಗಳೂ ಸಹ ಸ್ಮಾರ್ಟ್ ಆಗಿರಲಿ

(3ನೇ ಪುಟದಿಂದ) ನಡೆಸುವುದಾಗಿ ತಿಳಿಸಿದರು.

ಆಗ ರಾಜೇಶ್ವರಿ ಅವರು ಕೂಡಲೇ ಶಿಥಿಲಾವಸ್ಥೆಯಲ್ಲಿನ ಕಟ್ಟಡದ ಅಭಿವೃದ್ಧಿಗೆ ಕ್ರಮ ವಹಿಸುವಂತೆಯೂ ಸಲಹೆ ನೀಡುತ್ತಾ ಮುತುವರ್ಜಿ ತೋರಿಸಿದರು. ನಂತರ ಬಾಲಮಂದಿರದ ಅಡುಗೆ ಕೋಣೆಗೆ ತೆರಳಿ ಅಲ್ಲಿನ ವ್ಯವಸ್ಥೆ ಪರೀಕ್ಷಿಸಿದರಲ್ಲದೇ, ಮಕ್ಕಳಿಗೆ ಊಟೋಪಚಾರದ ಬಗ್ಗೆ ಮಹಿಳಾ ಅಡುಗೆ ಕೆಲಸಗಾರರ ಬಳಿ ವಿಚಾರಿಸಿದರು. ಕಾಫಿ, ಚಹಾ ಕುಡಿಯದ ಮಕ್ಕಳಿಗೆ ಹಾಲನ್ನಾದರೂ ನೀಡುವಂತೆ ಹೇಳಿದರು. ಕಂಪ್ಯೂಟರ್ ವಿಭಾಗ, ಗ್ರಂಥಾಲಯ ಹೀಗೆ ಬಾಲಮಂದಿರದ ಸಂಪೂರ್ಣ ಕಟ್ಟಡವನ್ನು ವೀಕ್ಷಿಸಿದರು.



ನಂತರ ಕಾರ್ಯಕ್ರಮ ಸ್ಥಳವಾದ 2 ವರ್ಷಗಳ ಹಿಂದೆ ನೂತನವಾಗಿ ನಿರ್ಮಿಸಿ ಉದ್ಘಾಟಿಸಲಾಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ತೆರಳಿ ಅಲ್ಲಿನ ಆಡಳಿತ ಕಚೇರಿ ಕೊಠಡಿಗಳು, ಉಪನಿರ್ದೇಶಕರ ಕೊಠಡಿ ಸುಸಜ್ಜಿತವಾಗಿರುವುದನ್ನು ಕಂಡು ಸಂತಸ ಪಟ್ಟರಲ್ಲದೇ, ನಿಮ್ಮ ಕಚೇರಿ ಹೇಗೆ ಸುಸಜ್ಜಿತ, ಸ್ಮಾರ್ಟ್ ಆಗಿದೆಯೋ ಹಾಗೆಯೇ ಬಾಲಮಂದಿರದಲ್ಲಿ ಮಕ್ಕಳು ವಾಸಿಸುವ ಕೊಠಡಿಗಳನ್ನೂ ಸಹ ಸುಸಜ್ಜಿತ, ಸ್ಮಾರ್ಟ್ ಮಾಡಿ ಎಂದು ಸಲಹೆ ನೀಡಿದರು.

## ಮತದಾರರ ಕರಡು ಪಟ್ಟಿ ಪ್ರಕಟ

ದಾವಣಗೆರೆ, ನ.9- ಭಾವಚಿತ್ರವಿರುವ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯ ಮತದಾರರ ಕರಡು ಪಟ್ಟಿಯನ್ನು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ, ಮತದಾರರ ನೋಂದಣಾಧಿಕಾರಿಗಳ ಕಚೇರಿ, ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿ ಹಾಗೂ ಗೊತ್ತುಪಡಿಸಿದ ಸ್ಥಳಗಳಲ್ಲಿ ಪ್ರಚುರ ಪಡಿಸಲಾಗಿದೆ.

ಮತದಾರರ ಕರಡು ಪಟ್ಟಿಯಲ್ಲಿ ಮತದಾರರು ತಮ್ಮ ಹೆಸರುಗಳನ್ನು ವೆಬ್‌ಸೈಟ್ http:/ceo.karnataka.in/draftroll 2021 ರಲ್ಲಿ, ಸಂಬಂಧಪಟ್ಟ ಕಚೇರಿಗಳಲ್ಲಿ ಹಾಗೂ ಆಯಾ ಮತಗಟ್ಟೆಗಳಲ್ಲಿಯೂ ಪರಿಶೀಲಿಸಿಕೊಳ್ಳಬಹುದು ಎಂದು ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ತಿಳಿಸಿದ್ದಾರೆ.

# ಕೈದಾಳೆಯಲ್ಲಿ ಶುದ್ಧ ಜಲ ಅಭಿಯಾನ

ದಾವಣಗೆರೆ, ನ.9- ಕೈದಾಳೆ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಶುದ್ಧ ಜಲ ಅಭಿಯಾನ ಜಾಥಾ ನಡೆಯಿತು.

ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ನವ್ಯ ಸಂದೀಪ್ ಹಾಗೂ ಸದಸ್ಯರು ಮತ್ತು ಕೈದಾಳೆ ಒಕ್ಕೂಟದ ಅಧ್ಯಕ್ಷ ವೈ.ಟಿ. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅನೇಕ ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿಕೊಂಡು ಬಂದಿದೆ. ಅದರಲ್ಲಿ ಶುದ್ಧಗಂಗಾ ಕಾರ್ಯಕ್ರಮವೂ ಒಂದು. ಕೇವಲ ಪ್ರತಿ ಲೀಟರ್‌ಗೆ 15 ಪೈಸೆಯಂತೆ 20 ಲೀಟರ್ ಕ್ಯಾನ್‌ಗೆ 3 ರೂ. ಪಡೆದು ಗ್ರಾಹಕರಿಗೆ ಶುದ್ಧ ನೀರು ವಿತರಿಸುತ್ತಿದೆ ಎಂದರು.




ಶುದ್ಧ ಜಲ ಅಭಿಯಾನ ಕಾರ್ಯಕ್ರಮ ಕುರಿತು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ವೈ.ಟಿ. ಗುರುಮೂರ್ತಿ ಮಾತನಾಡಿ, ಫ್ಲೋರೈಡ್ ಮತ್ತು ಕಲುಷಿತ ಬೋರ್‌ವೆಲ್ ನೀರು ಸೇವನೆಯಿಂದ ಜನರು ಪದೇ ಪದೇ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಶುದ್ಧ ನೀರನ್ನು ಬಳಸುವುದರಿಂದ ನಾವು ಆರೋಗ್ಯವಾಗಿರಬಹುದು ಎಂದರು.

ಶುದ್ಧಗಂಗಾ ಮೇಲ್ವಿಚಾರಕ ಸಿ.ಆರ್. ಮನು ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಶುದ್ಧಗಂಗಾ ಹೆಸರಿನಲ್ಲಿ ಇದುವರೆಗೆ 324 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು, ಪ್ರತಿ ಲೀಟರ್‌ಗೆ 15 ಪೈಸೆಯಂತೆ 90,000 ಬಳಕೆದಾರರು ದಿನವಹಿ ನೀರು ತೆಗೆದುಕೊಂಡು ಹೋಗುತ್ತಿದ್ದಾರೆ. ಶುದ್ಧ ನೀರು ಅನೇಕ ಕಾಯಿಲೆಗಳಿಗೆ ರಾಮಬಾಣವಿದ್ದಂತೆ ಎಂದು ತಿಳಿಸಿದರು.

ಸದಸ್ಯರಾದ ಕೇಶವಮೂರ್ತಿ, ಲಿಂಗರಾಜು, ರಾಕೇಶ್, ಅಶ್ವಿನಿ ಮತ್ತು ಇತರರು ಉಪಸ್ಥಿತರಿದ್ದರು.

## ಕೆ.ಆರ್.ಮಾರುಕಟ್ಟೆಯಲ್ಲಿ ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆ



ದಾವಣಗೆರೆ, ನ.9- ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಸೊಪ್ಪು ಮತ್ತು ತರಕಾರಿ ವರ್ತಕರ ವತಿಯಿಂದ ನಟ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 11ನೇ ದಿನದ ಪುಣ್ಯಸ್ಮರಣೆ ಅಂಗವಾಗಿ ಅನ್ನ ಸಂತರ್ಪಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ವರ್ತಕರಾದ ಅಂಜಿನಪ್ಪ, ಕರಿಬಸಪ್ಪ, ಅಶೋಕ್, ತಿಪ್ಪಣ್ಣ, ಆರ್.ಪಿ.ಹೆಚ್.ರುದ್ರೇಶ್, ನಾಗರಾಜ್ ರೆಡ್ಡಿ, ಅಪ್ಪು ಸ್ವಾಮಿ, ವೀರಯ್ಯ ಸ್ವಾಮಿ, ಕುಮಾರಣ್ಣ, ಸತ್ಯಣ್ಣ, ಪರಶುರಾಮ್, ವೆಂಕಟೇಶ್ ಮತ್ತಿತರರು ಭಾಗವಹಿಸಿದ್ದರು.

## ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆ

ದಾವಣಗೆರೆ, ನ.9- ಭಾರತ ಸರ್ಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದ ನೆಹರು ಯುವ ಕೇಂದ್ರದ ವತಿಯಿಂದ ಜಿಲ್ಲೆಯ ಯುವ ಜನರಿಗಾಗಿ ಭಾಷಣ ಸ್ಪರ್ಧೆ ಏರ್ಪಡಿಸಿದ್ದು, ದೇಶ ಭಕ್ತಿ ರಾಷ್ಟ್ರ ನಿರ್ಮಾಣದ ಕುರಿತು ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬಕಾ ವಿಶ್ವಾಸ್, ಸಬ್ ಕಾ ಪ್ರಯಾಸ್ ವಿಷಯದ ಕುರಿತು ಭಾಷಣ ನಡೆಯಲಿದೆ.

ಆಸಕ್ತರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ನೆಹರು ಯುವ ಕೇಂದ್ರ, ಕೊಠಡಿ ಸಂಖ್ಯೆ-42 ಅಥವಾ ಸಂಬಂಧಪಟ್ಟ ತಾಲ್ಲೂಕು ರಾಷ್ಟ್ರೀಯ ಯುವ ಕಾರ್ಯಕರ್ತರನ್ನು ಸಂಪರ್ಕಿಸಬಹುದು.

ತಾಲ್ಲೂಕು ಮಟ್ಟದಲ್ಲಿ ಇದೇ ದಿನಾಂಕ 20 ರವರೆಗೆ, ಜಿಲ್ಲಾ ಮಟ್ಟದಲ್ಲಿ ಇದೇ ದಿನಾಂಕ 21 ರಿಂದ ಡಿಸೆಂಬರ್ 15 ರವರೆಗೆ, ರಾಷ್ಟ್ರ ಮಟ್ಟದಲ್ಲಿ 2022 ಜನವರಿ 26 ರೊಳಗಾಗಿ ಸ್ಪರ್ಧೆ ಏರ್ಪಡಿಸಲಾಗುತ್ತದೆ. ವಿವರಕ್ಕೆ ಜಿಲ್ಲಾ ಯುವ ಅಧಿಕಾರಿ (9901863789) ಗಳನ್ನು ಸಂಪರ್ಕಿಸಬಹುದು.

# ಕಾಂಗ್ರೆಸ್ ಸೇರಿದ ಜೆಡಿಎಸ್‌ನ ದೇವೇಂದ್ರಪ್ಪ

(3ನೇ ಪುಟದಿಂದ) ಮಾಡಿಕೊಳ್ಳಲಾಗಿದೆ ಎಂದರು.

ರಾಜ್ಯದ ಪ್ರತಿ ಜಿಲ್ಲೆಗಳಲ್ಲಿನ ಜನಪ್ರತಿನಿಧಿ ಗಳು, ವಿವಿಧ ಘಟಕಗಳ ಪದಾಧಿಕಾರಿಗಳು ಸದಸ್ಯತ್ವ ಪಡೆಯಲು ಸದಸ್ಯತ್ವ ಮರು ನವೀಕರಣಗೊಳಿಸಲು ಹಾಗೂ ಯಾವುದೇ ಪಕ್ಷ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಗೊಳ್ಳಲು ನವೆಂಬರ್ 14 ರಂದು ಪಂಡಿತ್ ಜವಾಹರ್ ಲಾಲ್ ನೆಹರು ಜನ್ಮದಿನದಂದು ರಾಷ್ಟ್ರೀಯ ನಾಯಕರ ಸಮ್ಮುಖದಲ್ಲಿ ಅರಮನೆ ಮೈದಾನದಲ್ಲಿ ಚಾಲನೆ ನೀಡಲಾಗುವುದು. ಷರತ್ತು ರಹಿತವಾಗಿ ಸದಸ್ಯತ್ವ ಪಡೆಯಲು ಅಲ್ಲಂ ವೀರಭದ್ರಪ್ಪ ಅವರ ಸಮಿತಿ ನೇತೃತ್ವದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ಸೇರ್ಪಡೆಗೊಂಡ ದೇವೇಂದ್ರಪ್ಪ ಮಾತನಾಡಿ, ಪಕ್ಷ ಸಿದ್ಧಾಂತ ಗಳಿಗೆ ಒಪ್ಪಿ ಯಾವುದೇ ಷರತ್ತುಗಳಿಲ್ಲದೆ ಸ್ವಯಂಪ್ರೇರಿತವಾಗಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದು, ಬಹುದಿನದ ಕನಸು ನನಸಾಗಿದೆ. ಪಕ್ಷದ ವರಿಷ್ಠರ ಸಲಹೆಯಂತೆ ಸ್ಥಳೀಯ ನಾಯಕರ ಒಡಗೂಡಿ ಪಕ್ಷ ಸಂಘಟನೆ ಗೊಳಿಸಿ ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಜಗಳೂರಿನ ಮಾಜಿ ಶಾಸಕ ಎಚ್.ಪಿ. ರಾಜೇಶ್, ಕೆಪಿಸಿಸಿ ಮಾಜಿ ಕಾರ್ಯದರ್ಶಿ ಅಸಗೋಡು ಜಯಸಿಂಹ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಎಸ್.ಟಿ. ವಿಭಾಗದ ರಾಜ್ಯ ಅಧ್ಯಕ್ಷ ಕೆ.ಪಿ. ಪಾಲಯ್ಯ, ಜಗಳೂರು ಬ್ಲಾಕ್ ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್ ಬ್ಲಾಕ್ ಅಧ್ಯಕ್ಷರಾದ ಷಂಷೀರ್ ಅಹಮ್ಮದ್, ಎಸ್. ಮಂಜುನಾಥ್, ಮಾಜಿ ಚೇರ್ಮನ್ ಸಯ್ಯದ್ ಅಹಮ್ಮದ್ ಹಾಗೂ ಇತರರು ಭಾಗವಹಿಸಿದ್ದರು.

## ಡಿ.10 ರಂದು ವಿಪ ಚುನಾವಣೆ

(3ನೇ ಪುಟದಿಂದ) ಅಪ್ಪಾಜಿಗೌಡ, ತುಮಕೂರಿನಿಂದ ಕಾಂತರಾಜ್, ಹಾಸನದಿಂದ ಎಂ.ಎ. ಗೋಪಾಲಸ್ವಾಮಿ, ಚಿಕ್ಕಮಗಳೂರಿನಿಂದ ಎಂ.ಕೆ. ಪ್ರಾಣೇಶ್, ಉಡುಪಿ, ದಕ್ಷಿಣ ಕನ್ನಡದಿಂದ ಕೆ. ಪ್ರತಾಪ್‌ಚಂದ್ರ ಶೆಟ್ಟಿ ಹಾಗೂ ಕೋಟಾ ಶ್ರೀನಿವಾಸ್ ಪೂಜಾರಿ, ಶಿವಮೊಗ್ಗದಿಂದ ಆರ್. ಪ್ರಸನ್ನಕುಮಾರ್, ಚಿತ್ರದುರ್ಗದಿಂದ ರಘು ಆಚಾರ್, ಬಳ್ಳಾರಿಯಿಂದ ಕೆ.ಸಿ. ಕೊಂಡಯ್ಯ, ರಾಯಚೂರಿನಿಂದ ಬಸವರಾಜ ಪಾಟೀಲ್ ಇಟಗಿ, ಧಾರವಾಡದಿಂದ ಪ್ರದೀಪ್ ಶೆಟ್ಟರ್ ಹಾಗೂ ಮಾನೆ ಶ್ರೀನಿವಾಸ್, ಉತ್ತರ ಕನ್ನಡದಿಂದ ಜಿ.ಎಸ್. ಲಕ್ಷ್ಮಣ್, ಬೆಳಗಾವಿಯಿಂದ ಮಹಂತೇಶ್ ಕವಟಗಿಮಠ್ ಹಾಗೂ ವಸಂತರಾವ್ ಪಾಟೀಲ್, ವಿಜಯಪುರದಿಂದ ಎಸ್.ಆರ್. ಪಾಟೀಲ್, ಸುನೀಲ್‌ಗೌಡ ಪಾಟೀಲ್, ಕಲಬುರಗಿಯಿಂದ ಬಿ.ಜಿ. ಪಾಟೀಲ್, ಬೀದರ್‌ನಿಂದ ವಿಜಯಸಿಂಗ್ ಆಯ್ಕೆಗೊಂಡಿದ್ದರು, ಇವರ ಸದಸ್ಯಾವಧಿ ಜನವರಿ 5ಕ್ಕೆ ಅಂತ್ಯಗೊಳ್ಳುತ್ತಿರುವುದರಿಂದ ಅದಕ್ಕೂ ಮುನ್ನವೇ ಚುನಾವಣೆ ನಡೆಯಬೇಕಿದೆ.

## ರೈತರಿಂದ ಟ್ರ್ಯಾಕ್ಟರ್ ಮೆರವಣಿಗೆ

(3ನೇ ಪುಟದಿಂದ) ಪಂಜಾಬ್, ಹರಿಯಾಣ ಹಾಗೂ ಉತ್ತರ ಪ್ರದೇಶಗಳ ರೈತರು ಕಳೆದ ನವೆಂಬರ್ 26ರಿಂದ ದೆಹಲಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. 40 ಪ್ರತಿಭಟನಾ ನಿರತ ರೈತ ಒಕ್ಕೂಟಗಳ ಸಂಘಟನೆಯಾದ ಎಸ್.ಕೆ.ಎಂ., ಟ್ರ್ಯಾಕ್ಟರ್ ಮೆರವಣಿಗೆ ನಡೆಸುವ ನಿರ್ಧಾರ ತೆಗೆದುಕೊಂಡಿದೆ. ನವೆಂಬರ್ 26ರಂದು ದೇಶಾದ್ಯಂತ ಅಭಿಯಾನ ನಡೆಸಲೂ ಸಹ ನಿರ್ಧರಿಸಲಾಗಿದೆ.

# ಶಾಲೆಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು



ದಾವಣಗೆರೆ, ನ.9- ತಾಲ್ಲೂಕಿನ ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಅಣಜಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಸಿಹಿ ವಿತರಿಸುವ ಮೂಲಕ ಶಾಲೆಗೆ ಮಕ್ಕಳನ್ನು ಸ್ವಾಗತಿಸಲಾಯಿತು.

ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ಮಾತನಾಡಿ, ಮಹಾಮಾರಿಯಿಂದಾಗಿ ಮಕ್ಕಳು ಶಾಲೆಗಳಿಲ್ಲದೇ ಶಿಕ್ಷಣದಿಂದ ಹಿಂದುಳಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಲೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಂಡು, ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಮಕ್ಕಳ ಆರೋಗ್ಯದ ಕಡೆ ಸೂಕ್ತ ಗಮನ ಹರಿಸುವಂತೆ ಅಂಗನವಾಡಿ ಶಿಕ್ಷಕರಿಗೆ ಹಾಗೂ ಮಕ್ಕಳ ಪೋಷಕರಿಗೆ ಕಿವಿಮಾತು ಹೇಳಿದರು.

ಎ.ಪಿ.ಎಂ.ಸಿ. ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್ ಮಾತನಾಡಿ, ಕೋವಿಡ್‌ನಿಂದ ಶಿಕ್ಷಣ ಕ್ಷೇತ್ರಕ್ಕೆ ಬಹಳ ತೊಂದರೆಯಾಗಿದ್ದು, ಶಿಕ್ಷಕರು ಬೀದಿ ಪಾಲಾಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಅಂಗನವಾಡಿ ಕೇಂದ್ರಗಳನ್ನು ಉತ್ತಮ ಕಟ್ಟಡಗಳಲ್ಲಿ ಆರಂಭಿಸಿ, ಮಕ್ಕಳ ಹಿತದೃಷ್ಟಿಯನ್ನು ಕಾಪಾಡಿ, ಮಕ್ಕಳ ಕಲಿಕೆಗೆ ಶಿಕ್ಷಕರು ಹೆಚ್ಚಿನ ಜವಾಬ್ದಾರಿ ವಹಿಸಬೇಕು ಎಂದರು.

ಅಂಗನವಾಡಿ ಕೇಂದ್ರಗಳಲ್ಲಿ ಯಾವುದೇ ಸಮಸ್ಯೆ ಬಂದರೂ ತಮ್ಮನ್ನು ಸಂಪರ್ಕಿಸಿದರೆ ಸಂಬಂಧಿಸಿದವರ ಜೊತೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಅವರು ಭರವಸೆ ನೀಡಿದರು. ಗ್ರಾ.ಪಂ. ಸದಸ್ಯ ಹನುಮಂತಪ್ಪ, ನಿವೃತ್ತ ಯೋಧ ಅಂಜಿನಪ್ಪ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಹನುಮಂತಪ್ಪ, ಮಂಜುನಾಥ್ ಮತ್ತು ಇತರರು ಭಾಗವಹಿಸಿದ್ದರು.

# ಕಾರ್ಯತಂತ್ರ ಕೈ ಬಿಡಲು ಜೆಡಿಎಸ್ ನಿರ್ಧಾರ

(3ನೇ ಪುಟದಿಂದ) ನಿರೀಕ್ಷಿತ ಪ್ರಮಾಣದಲ್ಲಿ ಜೆಡಿಎಸ್ ಬೆಂಬಲಕ್ಕೆ ನಿಲ್ಲಲಿಲ್ಲ.

ಅವರು ಬೆಂಬಲ ನೀಡಿದ್ದರೆ ಮುಂದಿನ ಚುನಾವಣೆಯಲ್ಲಿ ಗಣನೀಯ ಪ್ರಮಾಣದಲ್ಲಿ ಆ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂಬುದು ನನ್ನ ಉದ್ದೇಶವಾಗಿತ್ತು, ಅದೇ ರೀತಿ ಪ್ರತಿಸ್ಪರ್ಧಿ ಕಾಂಗ್ರೆಸ್ ಪಕ್ಷಕ್ಕೆ ಹೊಡೆತ ನೀಡುವುದೂ ನನ್ನ ಉದ್ದೇಶವಾಗಿತ್ತು. ಆದರೆ, ಬಿಜೆಪಿ ವಿರುದ್ಧ ಹೋರಾಡಲು ನಾವು ಮಾತ್ರ ಸಮರ್ಥರು ಎಂಬ ಕಾಂಗ್ರೆಸ್ ಪಕ್ಷದ ಪ್ರಚಾರವನ್ನು ಮುಸ್ಲಿಮರು ನಂಬಿದ್ದಾರೆ, ಇದೇ ಕಾರಣಕ್ಕಾಗಿ ಸಿಂಧಗಿಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ನಿರೀಕ್ಷಿತ ಪ್ರಮಾಣದ ಮತಗಳನ್ನು ಪಡೆಯಲು ಸಾಧ್ಯವಾಗಲಿಲ್ಲ ಎಂದರು.

# ಎಸ್ಸಿ-ಎಸ್ಟಿಗೆ ಹಣ ನೀಡಿ ಮತ ಹಾಕಿಸಿಕೊಳ್ಳುವ ಕಾಲ ಈಗಿಲ್ಲ, ಈಗಿನದು ಪಾಠ ಕಲಿಸುವ ಕಾಲ

(3ನೇ ಪುಟದಿಂದ) ಜಾತ್ರೆಯಲ್ಲಿ ಜನರು ನೀಡಿದ ದೇಣಿಗೆ ಹಣದಲ್ಲಿ ಖರ್ಚು ತೆಗೆದು ಸುಮಾರು 4 ಕೋಟಿ ರೂ.ಗಳನ್ನು ವಿವಿಧ ಬ್ಯಾಂಕುಗಳಲ್ಲಿ ಠೇವಣಿ ಮಾಡಲಾಗಿದೆ ಎಂದು ಬಾಂಡ್ ಸಹಿತ ಸಭೆಗೆ ಮಾಹಿತಿ ನೀಡಿದರು.

ಸಮಾಜದ ನೋವುಗಳು, ಸವಾಲುಗಳು ಸಾಕಷ್ಟಿವೆ. ಮೀಸಲಾತಿ ಹೆಚ್ಚಳ ಪ್ರಮುಖ ಬೇಡಿಕೆಯಾಗಿದೆ. ಇಚ್ಛಾಶಕ್ತಿಯ ಕೊರತೆಯಿಂದಾಗಿ ಮೀಸಲಾತಿ ಹೆಚ್ಚಳ ಇಷ್ಟು ವರ್ಷ ವಿಳಂಬವಾಗಿದೆ. ಹಾಗಾಗಿ ನಿಮ್ಮನ್ನು ಎಚ್ಚರಿಸಿ ನಮ್ಮೊಂದಿಗೆ ಹೋರಾಟಕ್ಕೆ ಇಳಿಸಿದ್ದೇವೆ. ಎಸ್ಸಿ-ಎಸ್ಟಿ ಸಮುದಾಯಗಳ ಬೇಡಿಕೆಗಳ ಬಗ್ಗೆ ಸರ್ಕಾರ ಬೇಜವಾಬ್ದಾರಿತನ ತೋರುತ್ತಿದ್ದು, ಇದು ಹೀಗೆ ಮುಂದುವರೆದರೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಸ್ವಾಮೀಜಿ ಎಚ್ಚರಿಸಿದರು.

ಜನರನ್ನು ಚುನಾವಣೆ ಬಂದಾಗ ಎಸ್ಸಿ-ಎಸ್ಟಿ ಜನಾಂಗಕ್ಕೆ ಹಣ ಕೊಟ್ಟು ಮತ ಹಾಕಿಸಿಕೊಳ್ಳುವ ಕಾಲ ಮುಗಿದಿದೆ. ನಮ್ಮ ಜನರೂ ಜಾಗೃತರಾಗಿದ್ದಾರೆ. ನೀವು ಎಷ್ಟೇ ಹಣ ನೀಡಿದರೂ ಮತವನ್ನು ಯಾರಿಗೆ ಹಾಕಬೇಕೆಂದು ನಿರ್ಧರಿಸಿರುತ್ತಾರೋ ಅವರಿಗೆ ಹಾಕುತ್ತಾರೆ ಎಂದು ಹಾನಗಲ್ ಚುನಾವಣೆ ಫಲಿತಾಂಶವನ್ನು ಸ್ವಾಮೀಜಿ ಉದಾಹರಣೆ ನೀಡಿದರು.

ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಮಾತನಾಡಿ, ಎಸ್ಟಿ ಮೀಸಲಾತಿ ಹೆಚ್ಚಳ ಸಂವಿಧಾನಿಕ ಹಕ್ಕಾಗಿದ್ದು, ಆ ಕೆಲಸ ಆಗುವವರೆಗೂ ಶ್ರೀಗಳ ನೇತೃತ್ವದಲ್ಲಿ ಹೋರಾಟ ಅನಿವಾರ್ಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಾಲ್ಮೀಕಿ ವಿಜಯ ಸಂಪುಟ-3 ರ ಸಂಪಾದಕ ಡಾ. ಎ.ಬಿ. ರಾಮಚಂದ್ರಪ್ಪ, ಶೋಷಿತರು ಕೇವಲ ಭರವಸೆಯಲ್ಲಿ ಬೆಂದು ಹೋಗಿದ್ದೇವೆ. ಸಮುದಾಯಗಳ ಸಂಕಟಗಳ ನಿವಾರಣೆಗಾಗಿ ಪಕ್ಷ ರಾಜಕಾರಣ ಬಿಟ್ಟು ಎಲ್ಲರೂ ಒಂದೆಡೆ ಸೇರಿ ಚರ್ಚಿಸಿದರೆ ಯಾವುದೇ ಸರ್ಕಾರ ಇದ್ದರೂ ನಮ್ಮ ಕಡೆ ತಿರುಗಿ ನೋಡುತ್ತದೆ ಎಂದರು.

ವಾಲ್ಮೀಕಿ ವಿಜಯ ಸಂಪುಟ-4 ರ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿರುವ ಚಿತ್ರದುರ್ಗದ ಪ್ರೊ. ಕರಿಯಪ್ಪ ಮಾಳಿಗಿ ಮಾತನಾಡಿ, ಜಾತ್ರೆಯಲ್ಲಿ ಶಕ್ತಿ ಇಲ್ಲದ ಜನರ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಚರ್ಚೆ ಆಗಲಿ ಎಂದು ಒತ್ತಾಯಿಸಿದರು.

ಮೈಸೂರಿನ ದೇವಪ್ಪನಾಯಕ, ಧಾರವಾಡದ ಭರತ್ ಮಗದೂರು, ವಕೀಲ ಗುಮ್ಮನೂರು ಮಲ್ಲಿಕಾರ್ಜುನ್, ಚಳ್ಳಕೆರೆಯ ರಾಘವೇಂದ್ರ, ಮಠದ ಧರ್ಮದರ್ಶಿಗಳಾದ ಮುಖಂಡ ಹೊದಿಗೆರೆ ರಮೇಶ್, ತುಂಗೇನಹಳ್ಳಿ ಲೋಹಿತ್, ಬಿ. ವೀರಣ್ಣ, ಹರ್ತಿಕೋಟೆ ವೀರೇಂದ್ರ ಸಿಂಹ, ಹೊಸಪೇಟೆಯ ಜಂಬಣ್ಣ ಮಾತನಾಡಿದರು.

ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಸಮಾಜದ ಹಾಸನ ಜಿಲ್ಲಾಧ್ಯಕ್ಷ ರವಿಕುಮಾರ್, ಚಿಕ್ಕಮಗಳೂರು ಅಧ್ಯಕ್ಷ ಭೀಮಣ್ಣ, ಬೀದರ್ ಜಿಲ್ಲಾಧ್ಯಕ್ಷ ದಶರಥ್ ಜಮಾದಾರ್, ಬಳ್ಳಾರಿ ಜಿಲ್ಲಾಧ್ಯಕ್ಷ ದೊಡ್ಡ ಎರ್ರಿಸ್ವಾಮಿ, ದಾವಣಗೆರೆ ತಾಲ್ಲೂಕು ಅಧ್ಯಕ್ಷ ಹದಡಿ ಹಾಲಪ್ಪ, ಮಠದ ಧರ್ಮದರ್ಶಿಗಳಾದ ಕೊಪ್ಪಳದ ರತ್ನಾಕರ, ಹಾಸನದ ಮಹೇಶ್, ನಲುವಾಗಲು ನಾಗರಾಜಪ್ಪ, ವಿಜಯಪುರ ಜಿಲ್ಲೆಯ ಕೌಲಗಿ, ಉಚ್ಚಂಗೆಪ್ಪ, ಹರಿಹರ ತಾಲ್ಲೂಕು ಗ್ರಾಮಾಂತರ ಅಧ್ಯಕ್ಷ ಕೆ.ಆರ್. ರಂಗಪ್ಪ, ಕೆ.ಎನ್. ಹಳ್ಳಿಯ ವಿ. ಕುಬೇರಪ್ಪ, ತಿಮ್ಮೇನಹಳ್ಳಿ ಚಂದ್ರಪ್ಪ, ಜಿಗಳಿಯ ಜಿ. ಆನಂದಪ್ಪ, ಗಣೇಶ್ ಹುಲ್ಲುಮನಿ, ಮಲ್ಲಾಪುರ ದೇವರಾಜ್, ಕೆಪಿಟಿಸಿಎಲ್ ಎಇಇ ಜಯ್ಯಪ್ಪ, ಶ್ಯಾಗಲೆ ಸತೀಶ್, ಅಣಜಿ ಅಂಜಿನಪ್ಪ, ತಣಿಗೆರೆ ಸನ್ನಿ, ರಾಘು ದೊಡ್ಮನಿ, ಕೊಕ್ಕನೂರಿನ ಕೆ.ಹೆಚ್. ಕೊಟ್ರಪ್ಪ, ಡಿ. ಸೋಮಶೇಖರ್, ಪಾರ್ವತಿ ಪಾಳೇಗಾರ್ ನಾಗರಾಜ್, ರಾಜನಹಳ್ಳಿ ಗ್ರಾ.ಪಂ. ಅಧ್ಯಕ್ಷರಾದ ಚೈತ್ರ ಲಂಕೇಶ್ ಸೇರಿದಂತೆ ಅನೇಕರು ಸಭೆಯಲ್ಲಿದ್ದರು. 'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್ ಸ್ವಾಗತಿಸಿದರು.


Estd : 2009

ವಿದ್ಯಾವೃಕ್ಷ ಎಜುಕೇಷನಲ್ ಟ್ರಸ್ಟ್ (ರಿ.)

ಎಕ್ಸೆಲ್ ಆರೇಂಜ್ ಟಾಟ್ಸ್

Excel ORANGE TOTS

1st Branch #1680/8, 12th Cross Siddaveerappa Layout, Davangere

Mob : 94825 44828

2nd Branch #306 & 308 Dixit Road Raghavendra Swamy Temple Lane, Davangere

Admissions Open For

PRE-NURSERY, NURSERY, JUNIOR KG, SENIOR KG & DAY CARE



ಬೇಕಾಗಿದ್ದಾರೆ

S.S.L.C/PUC/Degree ಆದ ಕಂಪ್ಯೂಟರ್ ಜ್ಞಾನವಿರುವ ಪುರುಷ ಕೆಲಸಗಾರರು ಬೇಕಾಗಿದ್ದಾರೆ.

ತಕ್ಷಣ ಸಂಪರ್ಕಿಸಿ :

ಜ್ಯೋತಿ ಗ್ಯಾಸ್ ಏಜೆನ್ಸಿ

1ನೇ ಕ್ರಾಸ್, ಅಶೋಕ ರಸ್ತೆ, ದಾವಣಗೆರೆ.

99645 96070, 08192 235060-6


**Before The Hon'ble District Consumer Commision at Davanagere**

**CC No 41/2021**

Petitioner : **K.G. Siddesh S/o Late Shekarappa** R/o Door No 172/28, 2nd Cross, Siddaveerappa Layout, Davangere

V/s

opponent : **R. Rajanna S/o Sanghavi Rajmal Kapoor Chand Jewelers and Pan-Broker,** No. 447, Bellodigalli, Davanagere

**Notice to Respondent under Order 5 Rule 20 CPC**

the above complainant filed the above Complaint against you Opponent for deficiency of service casued by you while discharging your duly as Jeweler and Pan-broke. Now the case is posted for appearance of you on 26.11.2021 at 11.30 am. Hence through this notice your Opponent hereby informed that you should appear before this Hon'ble Commissioner above mentioned date and time by personally and through an advocate. in case you failed to appear the case will be heard and determined in your absence as exparte given under my hand seal and singnature of the this day of 2021

K.N. Shashishekar
Advocate

Sheristadar
District Consumer Deputs Redressed commission, Davanagere


ಬೇಕಾಗಿದ್ದಾರೆ

Diploma in Hardware Networking / Software ಆದವರು ಬೇಕಾಗಿದ್ದಾರೆ.

ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

ಸಂಪರ್ಕಿಸಿ : ಎ.ಕೆ. ಫಾರ್ಮ

ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.


## ನೂತನ ಶಿಕ್ಷಣ ವಿದ್ಯಾಲಯಕ್ಕೆ ಶೇ.99 ಫಲಿತಾಂಶ

ದಾವಣಗೆರೆ, ನ.9- ನಗರದ ನೂತನ ಶಿಕ್ಷಣ ಮಹಾವಿದ್ಯಾಲಯದ ಈ ಸಾಲಿನ ಮೊದಲ ಹಾಗೂ ಮೂರನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು, ಎರಡರಲ್ಲೂ ಶೇ.99 ಫಲಿತಾಂಶ ಲಭಿಸಿದೆ ಎಂದು ಡಾ. ಕೆ.ಎಸ್. ದಿವಾಕರ ನಾಯ್ಕ್ ತಿಳಿಸಿದ್ದಾರೆ.

ಮೊದಲ ಸೆಮಿಸ್ಟರ್‌ನ ಹೆಚ್. ಆಶಾಬಿ ಹಾಗೂ ಕೆ.ಹೆಚ್. ಮಧು ಶೇ.85 (509), ಎಸ್. ಕೋಮಲ ಶೇ.83.83 (503), ಪುಮಾನಾ ನಾಜ್ ಶೇ.83.5 (501) ಅಂಕಗಳನ್ನು ಗಳಿಸಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನದಲ್ಲಿದ್ದಾರೆ. ಒಟ್ಟು ಫಲಿತಾಂಶದಲ್ಲಿ ಎಲ್ಲಾ 39 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಹಾಗೂ ಒಬ್ಬ ವಿದ್ಯಾರ್ಥಿನಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಮೂರನೇ ಸೆಮಿಸ್ಟರ್‌ನ ಕೆ.ವಿ. ಕಾವ್ಯ ಶೇ.86.17 (517), ಎಂ. ವೀಣಾ ಶೇ.85.67 (514) ಹಾಗೂ ಪಿ.ಜಿ. ವೀಣಾ ಶೇ.84.33 (506) ಅಂಕಗಳನ್ನು ಪಡೆದು ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನದಲ್ಲಿದ್ದಾರೆ.

## ಡಿ.ಇಡಿ ವಿಶೇಷ ಶಿಕ್ಷಣ ಕೋರ್ಸ್ ತರಬೇತಿ

ದಾವಣಗೆರೆ, ನ.9- ನಗರದ ಸಂಯುಕ್ತ ಪ್ರಾದೇಶಿಕ ಕೇಂದ್ರ (ಸಿಆರ್‌ಸಿ) ದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ನಂತರ ಉದ್ಯೋಗ ಆಧಾರಿತ ವಿಶೇಷ ಶಿಕ್ಷಣದಲ್ಲಿ ಶಿಕ್ಷಕರ ತರಬೇತಿ ಕೋರ್ಸ್‌ಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಆಸಕ್ತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು https://rciapproval.org ಆನ್‌ಲೈನ್ ಮೂಲಕ ವೆಬ್‌ಸೈಟ್‌ನಲ್ಲಿ ಸಲ್ಲಿಸಬಹುದು. ಆನ್‌ಲೈನ್ ನೋಂದಣಿಗಾಗಿ ಇದೇ ದಿನಾಂಕ 11 ಕೊನೆಯ ದಿನ. ಪ್ರವೇಶ ಪ್ರಕ್ರಿಯೆ ಇದೇ ದಿನಾಂಕ 16 ರಿಂದ ಆರಂಭವಾಗಲಿದೆ. ವಿವರಕ್ಕೆ ದೂ.ಸಂ. 08192-233464 /465, 8746043062, 8610660894 ಮತ್ತು 9490020080 ಅಥವಾ ಇ-ಮೇಲ್- director.crcdvg@gmail.com ವೆಬ್‌ಸೈಟ್ https://crcdvg.nic.in ಗೆ ಸಂಪರ್ಕಿಸಬಹುದು ಎಂದು ದಾವಣಗೆರೆ ಕೇಂದ್ರದ ಡೈರೆಕ್ಟರ್ ಇನ್ ಚಾರ್ಜ್ ಅಧಿಕಾರಿ ಡಾ. ಕೆ. ಜ್ಞಾನವೇಲ್ ತಿಳಿಸಿದ್ದಾರೆ.


**JOB OPENINGS**

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Software Engineers (SAP) | 02 | BCA / MCA / BE | 0-1 |
| 02 | Accountants | 04 | Bcom / Mcom / MBA (FINANCE) TALLY / ERP / SAP BILLING OPERATORS | 0-1 |
| 03 | Accounts (Senior) | 01 | Bcom / Mcom / MBA (FINANCE) GST / INCOME TAX / SAP | 4-5 |
| 04 | Civil Engineers | 02 | Diploma Civil, BE Civil | 0-1 |
| 05 | Marketing/sales Officers | 03 | Bcom / Mcom / BBM / MBA Marketing | 2 |
| 06 | Sales Executives for marketing retail & Project. with 2-wheeler | 10 | Any Degree (Diploma/ITI | 0-1 |
| 07 | Front Office Assistant/Tele BDE Caller (Female) | 02 | Any Degree | 0-1 |
| 08 | Drivers (LCV, HCV) | 03 | LCV, HCV Badge | 0-1 |

Company Name : **HULLUMANE PROPERTIES & POWER PVT LTD.,**
# Depot Address - Behind Shashi Soap Factory
Land Mark-Towards Shiramagondanahalli Road, From Lokikere Road
Lokikere Industrial Area, Davangere-577 005. Karnataka
**Drop Resume to Email - hrhullumanepropertiespwr@yahoo.com**
**Call/Whatsup - 95130 25000**


**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**

**ಕೂಲಂಬಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ**

ಟೆಂಡರ್ ಸಂಖ್ಯೆ : PACS / WH5/2021-22 Phone : 97401 50809

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕೂಲಂಬಿ ಹೊನ್ನಾಳಿ ತಾಲ್ಲೂಕು ಗೋದಾಮು ಕಟ್ಟಡ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೋಂದಣೆಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು ಸೀಲ್ಡ್ ಮಾಡಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕೂಲಂಬಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರಿಗೆ ದಿನಾಂಕ 15.11.2021ರ ಸಂಜೆ 4.30ರೊಳಗೆ ಸಲ್ಲಿಸುವುದು, ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ 16.11.2021ರ ಮಧ್ಯಾಹ್ನ 3 ಗಂಟೆಗೆ ತೆರೆಯಲಾಗುವುದು. ಟೆಂಡರ್‌ನ ಅಂದಾಜು ಮೊತ್ತ ರೂ. 61 ಲಕ್ಷಗಳು. ಇ.ಎಂ.ಡಿ ಮೊತ್ತ ರೂ. 305000/-ಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕೂಲಂಬಿ ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಪಡೆದು ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಕೂಲಂಬಿ ಇವರ ದೂರವಾಣಿ ಸಂಖ್ಯೆ: 97401 50809 ಇವರನ್ನು ಸಂಪರ್ಕಿಸುವುದು.

ಸಹಿ/- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕೂಲಂಬಿ,
ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

# ಹಳ್ಳಿಗಳಲ್ಲಿ ಪ್ರತಿ ಮನೆಗೂ ಕಾನೂನು ನೆರವು ತಲುಪಿಸಿ



## ಅಂಗನವಾಡಿ ಕಾರ್ಯಕರ್ತೆಯರಿಗೆ ನ್ಯಾ. ರಾಜೇಶ್ವರಿ ಹೆಗಡೆ ಕರೆ

ದಾವಣಗೆರೆ, ನ.9- ಕಾನೂನಿನ ರಕ್ಷಣೆ ಮತ್ತು ನೆರವು ಜಿಲ್ಲೆಯ ಪ್ರತಿ ಹಳ್ಳಿಗಳ ಮನೆಗಳಿಗೂ ತಲುಪಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ಬಹಳ ಪ್ರಮುಖವಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ ಆದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ರಾಷ್ಟ್ರೀಯ ಮಹಿಳಾ ಆಯೋಗ, ಜಿಲ್ಲಾ ವಕೀಲರ ಸಂಘ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಮೂಲಕ ಮಹಿಳಾ ಸಬಲೀಕರಣ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳೊಂದಿಗೆ ಸಂಪರ್ಕದಲ್ಲಿರುವ ತಾವು ಕಾನೂನಿನ ಅರಿವು ಹೊಂದಿ, ಮುಖ್ಯವಾಗಿ ಅವರಿಗೆ ಕಾನೂನು ಅರಿವು ಮೂಡಿಸಿ, ಕಾನೂನು ನೆರವಿನ ಸದ್ಬಳಕೆಗೆ ಮುಂದಾಗುವಂತೆ ಜಾಗೃತಿ ಮೂಡಿಸಬೇಕು. ತಮ್ಮ ಸಂಪರ್ಕಕ್ಕೆ ಬರುವ ಜನರಿಗೂ ಸಹ ಕಾನೂನಿನ ಅರಿವು ಮೂಡಿಸುವುದರ ಜೊತೆಗೆ ಕಾನೂನಿನ ನೆರವು ಪಡೆಯುವಂತೆ ತಿಳುವಳಿಕೆ ಮೂಡಿಸಬೇಕು. ಆ ಮುಖೇನ ಕಾನೂನು ರಕ್ಷಣೆ, ನೆರವಿನಿಂದ ವಂಚಿತರಾಗುವುದನ್ನು ತಪ್ಪಿಸುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಸಲಹೆ ನೀಡಿದರು.

ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರಿಕರು ಶಿಸ್ತುಬದ್ಧ ಜೀವನದೊಂದಿಗೆ, ಕಾನೂನು ನೆರವು ಪಡೆದು ಒಳ್ಳೆಯ ನಾಗರಿಕರಾಗಿ ಬದುಕಬೇಕು ಎಂಬ ಉದ್ದೇಶ ಹೊಂದಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಸ್ಥಾಪನೆಗೊಂಡಿದ್ದು, ಅದು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಬೆಳೆದಿದೆ. ಈ ಪ್ರಾಧಿಕಾರದ ಮೂಲಕ ಮಹಿಳೆ, ಮಕ್ಕಳು ಹಾಗೂ ಮೂರು ಲಕ್ಷಕ್ಕಿಂತ ಕಡಿಮೆ ಆದಾಯವುಳ್ಳವರಿಗೆ ಉಚಿತ ಕಾನೂನು ನೆರವು ನೀಡಲಾಗುವುದು ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ್ ಅವರುಗಳು ಮಾತನಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಹೆಚ್. ವಿಜಯಕುಮಾರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಕೀಲರಾದ ಸಿ.ಪಿ. ಅನಿತಾ ಮಹಿಳೆ ಮತ್ತು ಕಾನೂನು, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ವಿಷಯವಾಗಿ ಹಾಗೂ ಐ.ಕೆ. ಮಂಜುಳಾ ಮಹಿಳೆಯ ಆಸ್ತಿಯ ಹಕ್ಕುಗಳು, ಜೀವನಾಂಶ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಅಂಗನವಾಡಿ ಕಾರ್ಯಕರ್ತರಾದ ಸೀತಾ ಪ್ರಾರ್ಥಿಸಿದರು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಧರಣಿಕುಮಾರ್ ಸ್ವಾಗತಿಸಿದರು. ಮೇಲ್ವಿಚಾರಕರಾದ ರತ್ನ ವಂದಿಸಿದರು.

# ಟಿ20 ನಾಯಕರಾಗಿ ರೋಹಿತ್ ಶರ್ಮ ನೇಮಕ



## ಕೊಹ್ಲಿ, ಬುಮ್ರಾಗೆ ವಿಶ್ರಾಂತಿ - ರುತುರಾಜ್, ಹರ್ಷಲ್ ಸೇರ್ಪಡೆ

ನವದೆಹಲಿ, ನ. 9 – ಭಾರತೀಯ ಕ್ರಿಕೆಟ್‌ನ ಟಿ 20 ತಂಡದ ನಾಯಕರಾಗಿ ರೋಹಿತ್ ಶರ್ಮ ಅವರನ್ನು ನೇಮಿಸಲಾಗಿದೆ. ಕೆ.ಎಲ್. ರಾಹುಲ್ ಅವರು ತಂಡದ ಉಪ ನಾಯಕರಾಗಿದ್ದಾರೆ.

ನವೆಂಬರ್ 17ರಿಂದ ನಡೆಯಲಿರುವ ನ್ಯೂಜಿಲ್ಯಾಂಡ್ ವಿರುದ್ಧದ ಮೂರು ಪಂದ್ಯಗಳ ಸರಣಿಯಿಂದ ವಿರಾಟ್ ಕೊಹ್ಲಿ ಹಾಗೂ ಜಸ್‌ಪ್ರಿತ್ ಬುಮ್ರಾ ಸೇರಿದಂತೆ ಹಲವರಿಗೆ ವಿಶ್ರಾಂತಿ ನೀಡಲಾಗಿದೆ. ಐ.ಪಿ.ಎಲ್. ಪಂದ್ಯ ಗಳಲ್ಲಿ ಅತಿ ಹೆಚ್ಚು ರನ್ ಗಳಿಸಿದ ರುತುರಾಜ್ ಗಾಯಕ್ವಾಡ್ ಹಾಗೂ ಅತಿ ಹೆಚ್ಚು ವಿಕೆಟ್ ಪಡೆದ ಹರ್ಷಲ್ ಪಟೇಲ್ ಅವರಿಗೆ ತಂಡದಲ್ಲಿ ಜಾಗ ನೀಡಲಾಗಿದೆ. ಗಾಯಗೊಂಡಿರುವ ಹಾರ್ದಿಕ್ ಪಾಂಡ್ಯ ಜಾಗಕ್ಕೆ ಆಲ್‌ರೌಂಡರ್ ವೆಂಕಟೇಶ ಅಯ್ಯರ್ ಬಂದಿದ್ದಾರೆ.

ಹಿರಿಯ ಲೆಗ್ ಸ್ಪಿನ್ನರ್ ಯಜುವೇಂದ್ರ ಚಹಲ್ ಹಾಗೂ ಮೊಹಮ್ಮದ್ ಸಿರಾಜ್ ಅವರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಶ್ರೇಯಸ್ ಅಯ್ಯರ್, ಅಕ್ಷರ್ ಪಟೇಲ್ ಹಾಗೂ ದೀಪಕ್ ಚಹರ್ ಅವರು ಮೀಸಲು ತಂಡದಿಂದ ಮುಖ್ಯ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


## ಕೈಲಾಸ ಸಮಾರಾಧನೆ



ಜನನ 13-03-1943 ಮರಣ 02-11-2021

ದಿ|| ಶ್ರೀ ಕೆ. ಜಯದೇವಪ್ಪನವರು

(ಮಾಜಿ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘ, ಬೆಂಗಳೂರು)

ದಾವಣಗೆರೆ ಜಿಲ್ಲೆ, ತಾಲ್ಲೂಕು, ಲೋಕಿಕೆರೆ ಗ್ರಾಮದ ವಾಸಿ ದಿ|| ಶ್ರೀ ಕರೇಗೌಡ್ರ ಜಯದೇವಪ್ಪ ಇವರ ಧರ್ಮಪತ್ನಿ

ಶ್ರೀಮತಿ ನಾಗರತ್ನಮ್ಮ ಹಾಗೂ ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ: 02-11-2021ನೇ ಮಂಗಳವಾರ ನನ್ನ ಪೂಜ್ಯ ಪತಿಯವರಾದ

ದಿ|| ಶ್ರೀ ಕೆ. ಜಯದೇವಪ್ಪನವರು

ಶಿವಾಧೀನರಾದರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು

ದಿನಾಂಕ: 10-11-2021ನೇ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸಮೃದ್ಧಿ ಸಭಾ ಭವನ, ವಿದ್ಯಾನಗರ, ಪೋಲೀಸ್ ಸ್ಟೇಷನ್ ಹಿಂಭಾಗ, ಬೈಪಾಸ್ ಸರ್ವೀಸ್ ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಶ್ರೀಮತಿ ನಾಗರತ್ನಮ್ಮ ಜಯದೇವಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರರು, ಸಹೋದರಿ ಮತ್ತು ಬಂಧು-ಮಿತ್ರರು.

ಶ್ರೀ ಮಂಜುನಾಥ ಮೆಡಿಕಲ್ಸ್, ಬೆಂಗಳೂರು.

ಶ್ರೀ ರೇಣುಕಾ ಆಗ್ರೋ ಟ್ರೇಡರ್ಸ್, ಶ್ರೀ ರೇಣುಕಾ ಟ್ರೇಡಿಂಗ್ ಕಂಪನಿ, ಶ್ರೀ ರೇಣುಕಾ ಟ್ರೇಡರ್ಸ್, ದಾವಣಗೆರೆ. ಶ್ರೀ ರೇಣುಕಾ ಕ್ಲಿನಿಕ್, ಹಾವೇರಿ.

ಶ್ರೀ ರೇಣುಕಾ ಬಿಲ್ಡರ್ಸ್ ಅಂಡ್ ಡೆವಲಪರ್ಸ್, ಬೆಂಗಳೂರು.



# ನೀರಾವರಿ : ನೆರೆಯ ರಾಜ್ಯಗಳು ಹೃದಯ ವೈಶಾಲ್ಯತೆ ಮೆರೆಯಲಿ

ಬೆಂಗಳೂರು, ನ.9- ನೀರಾವರಿ ವಿಷಯಗಳಲ್ಲಿ ಅಕ್ಕಪಕ್ಕದ ರಾಜ್ಯಗಳು ಕರ್ನಾಟಕದ ಬಗ್ಗೆ ಹೃದಯ ವೈಶಾಲ್ಯತೆ ಮೆರೆಯಬೇಕು ಹಾಗೂ ನೀರಾವರಿ ಬಿಕ್ಕಟ್ಟುಗಳನ್ನು ನ್ಯಾಯಾಲಯದ ಹೊರಗೆ ಬಗೆಹರಿಸಿಕೊಳ್ಳಲು ಮುಂದಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಲಹೆ ಮಾಡಿದ್ದಾರೆ.

ನಾಡಿನ ನದಿ ನೀರು ಬಳಕೆ ಹಾಗೂ ಜನರಿಗೆ ಜಲ ಲಭ್ಯತೆ ಖಾತ್ರಿಪಡಿಸುವ ಉದ್ದೇಶದಿಂದ ದೀರ್ಘಕಾಲೀನ ಅನುಕೂಲತೆಯ 'ಜನತಾ ಜಲಧಾರೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಾವೇರಿ, ಮೇಕೆದಾಟು ವಿಷಯದಲ್ಲಿ ತಮಿಳುನಾಡು ತಗಾದೆ ತೆಗೆಯುತ್ತದೆ, ಕೃಷ್ಣಾ ವಿಷಯದಲ್ಲಿ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳು ವಿವಾದ ಹುಟ್ಟು ಹಾಕುತ್ತಿವೆ, ಆದರೆ, ಆ ರಾಜ್ಯಗಳ ಅಸಂಖ್ಯಾತ ಜನರು ಕೆಂಪೇಗೌಡರು ಕಟ್ಟಿದ ಈ ಬೆಂಗಳೂರು ಮಹಾನಗರದಲ್ಲಿ ವಾಸ ಮಾಡುತ್ತಿದ್ದಾರೆ, ಅವರೆಲ್ಲರೂ ಕಾವೇರಿ ನೀರು ಕುಡಿಯುತ್ತಾ ಬದುಕುತ್ತಿದ್ದಾರೆ, ಇಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ, ಇದನ್ನು ಆಯಾ ರಾಜ್ಯಗಳ ಸರ್ಕಾರಗಳು ಅರ್ಥ ಮಾಡಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

# ನಾಳೆ ಒನಕೆ ಓಬವ್ವ ಜಯಂತಿ



ಬೆಂಗಳೂರು, ನ. 9 – ರಾಜ್ಯಾದ್ಯಂತ ನಾಡಿದ್ದು ದಿನಾಂಕ 11ರ ಗುರುವಾರ ಒನಕೆ ಓಬವ್ವ ಜಯಂತಿ ಆಚರಿಸುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಈ ಆಚರಣೆ ನೆರವೇರಲಿದೆ. ಒನಕೆ ಓಬವ್ವ ಜಯಂತಿ ಆಚರಣೆಗಾಗಿ ಇಲಾಖೆ ಈ ಹಿಂದೆ ಪ್ರಸ್ತಾವನೆ ರೂಪಿಸಿತ್ತು. ಚಿತ್ರದುರ್ಗದ ಇತಿಹಾಸದಲ್ಲಿ ಓಬವ್ವನ ಹೆಸರು ಮರೆಯಲಾಗದು. ಅವರು ಕರ್ನಾಟಕದ ವೀರ ವನಿತೆಯರಾದ ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕರ ಸಾಲಿಗೆ ಸೇರಿದವರು ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

# 14 ರಂದು ಅಥ್ಲೆಟಿಕ್ ಕ್ರೀಡಾಕೂಟ

ದಾವಣಗೆರೆ, ನ.9- ಡಿಸೆಂಬರ್‌ನಲ್ಲಿ ನಡೆಯುವ ರಾಷ್ಟ್ರೀಯ ಅಂತರ್ ಜಿಲ್ಲಾ ಕ್ರೀಡಾಕೂಟ (14 ಮತ್ತು 16 ವರ್ಷಗಳ ಬಾಲಕ-ಬಾಲಕಿಯರು)ಕ್ಕೆ ಜಿಲ್ಲೆಯ ಕ್ರೀಡಾಪಟುಗಳನ್ನು ಆಯ್ಕೆ ಸಂಬಂಧ ಇದೇ ದಿನಾಂಕ 14 ರಂದು ಅಥ್ಲೆಟಿಕ್ ಕ್ರೀಡಾಕೂಟ ನಡೆಯಲಿದೆ.

12, 14 ಹಾಗೂ 16 ವರ್ಷದೊಳಗಿನ ಆಸಕ್ತ ಬಾಲಕ, ಬಾಲಕಿಯವರು ಇದೇ ದಿನಾಂಕ 14ರ ಭಾನುವಾರ ಬೆಳಿಗ್ಗೆ 8.30ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಹೆಸರು ನೋಂದಾಯಿಸಬಹುದು. 14 ಮತ್ತು 16 ವರ್ಷದೊಳಗಿನ ಒಟ್ಟು 13 ಕ್ರೀಡಾಪಟುಗಳನ್ನು ರಾಷ್ಟ್ರೀಯ ಅಂತರ್ ಜಿಲ್ಲಾ ಕ್ರೀಡಾಕೂಟಕ್ಕೆ ಆಯ್ಕೆ ಮಾಡಿ ಕಳುಹಿಸಲಾಗುವುದು.


## ಮೊದಲ ವರ್ಷದ ವೈಕುಂಠ ಸಮಾರಾಧನೆ



ಪಂಡಿತ್ ಶ್ರೀ ಡಾ|| ಯೋಗಾಚಾರ್ಯರವರು

ಜನನ : 15.05.1943, ಮರಣ 21.11.2020

ನಿವೃತ್ತ ತೋಟಗಾರಿಕೆ ಅಧಿಕಾರಿಗಳು, ದಾವಣಗೆರೆ.

ನಮ್ಮ ಪೂಜ್ಯ ತಂದೆಯವರ ಮೊದಲ ವರ್ಷದ 'ವೈಕುಂಠ ಸಮಾರಾಧನೆ'ಯನ್ನು

ನಮ್ಮ ಬೆಂಗಳೂರು ನಿವಾಸದಲ್ಲಿ ದಿನಾಂಕ : 11.11.2021, ಗುರುವಾರ ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಿರುತ್ತೇವೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ಆಶಿಸುತ್ತೇವೆ.

ಸ್ಥಳ : #25, ವೆಂಕಟಾಚಾರಿ ನಗರ, ಲೊಟ್ಟೆಗೊಲ್ಲನಹಳ್ಳಿ, ಹೊಸ BEL ರಸ್ತೆ, ಬೆಂಗಳೂರು-560094 (GOLD'S GYM ಹತ್ತಿರ)

ಇಂತಿ ದುಃಖತಪ್ತರು : ಪತ್ನಿ – ಶ್ರೀಮತಿ ಗೌರಮ್ಮ ಯೋಗಾಚಾರ್, ಮಕ್ಕಳು, ಮೊಮ್ಮಕ್ಕಳು, ಕುಟುಂಬ ವರ್ಗದವರು, ಫೋ. : 86186 72327, 98457 40462



## ಗ್ರಾಹಕರ ಒತ್ತಾಯದ ಮೇರೆಗೆ ಸೇಲ್ 4 ದಿನಗಳು ಮುಂದುವರಿಸಲಾಗಿದೆ

ಜಿಲ್ಲಾ ಗುರುಭವನ ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆಯಲ್ಲಿ

NATIONAL & INTERNATIONAL BRANDED READYMADE GARMENTS

ಭಾರಿ ರಿಯಾಯಿತಿ ಮಾರಾಟ

ಮಹಿಳೆಯರ, ಪುರುಷರ, ಮಕ್ಕಳ ರೆಡಿಮೇಡ್ ಗಾರ್ಮೆಂಟ್ಸ್ ಹಾಗೂ ಬೆಡ್‌ಶೀಟ್‌ಗಳ ಮೇಲೆ ಭಾರಿ ರಿಯಾಯಿತಿ.

Raymond, ARROW USA·1851, IZOD, Pepe Jeans LONDON, Crocodile, PARK AVENUE, Lee, parx, NETPLAY, ColorPlus

ರಾಜಸ್ತಾನ ರಾಯಲ್ ಪ್ರಿಂಟ್ ಬೆಡ್‌ಶೀಟ್ ಮೇಳ

SYMBOL OF QUALITY

ಬೆಡ್ ಶೀಟ್ : ಕಥಾ ವರ್ಕ್ಸ್, ವರ್ಲಿ ಪ್ರಿಂಟ್, ಮಿಕ್ಕಿ ಮೌಸ್ ಪ್ರಿಂಟ್, ಕಾಟನ್ ಸ್ಯಾಟಿನ್ ಬೆಡ್‌ಶೀಟ್, ಕಲಂಕಾರಿ ಪ್ರಿಂಟ್,

ಎಂಬ್ರಾಯಿಡ್ ವರ್ಕ್ಸ್, ಕಲಂಕಾರಿ ಗೋಲ್ಡ್ ಪ್ರಿಂಟ್ AC ಬ್ಲಾಂಕೆಟ್, ಪ್ಯಾಚ್ ವರ್ಕ್ಸ್ ಇತ್ಯಾದಿ

ಕುಶನ್ ಕವರ್ : ಸೋಫಾ ಶೀಟ್, ದಿವಾನ್ ಕಾಟ್ ಶೀಟ್ ಪಿಲ್ಲೋ ಕವರ್, ಮ್ಯಾಟ್, ಟೇಬಲ್ ಕ್ಲಾತ್, ವೆಜಿಟೇಬಲ್ ಪ್ರಿಂಟ್, ಸ್ಕೈಜ್ ಬೆಡ್ ಶೀಟ್ ಇತ್ಯಾದಿ

50,000 ವಿವಿಧ ಪ್ರಕಾರದ ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ–ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಲೇಡಿಸ್ ಪೈಜಾಮ, ಕಿಡ್ಸ್ ಡ್ರೇಸ್, ಶರ್ಟ್, ಫ್ಯಾನ್ಸಿ, ಕುರ್ತೀಸ್, ನೈಟಿ ಎಕ್ಸ್‌ಪೋರ್ಟ್ ಸರ್ಪಸ್ ಐಟಂ ಹಾಗೂ ಇತರೆ

ಕೇವಲ ರೂ. 150/- ರಿಂದ 350/- ರವರೆಗೆ

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ : MRP. Upto ರೂ.3000/-

ಲೇಡಿಸ್ ಕುರ್ತಿಸ್ : ಮಲ್ಟಿಗ್ರೀನ್ ಕಾಟನ್ ಕುರ್ತೀಸ್, ವಿವಿಧ ಬಣ್ಣಗಳ ಕುರ್ತೀಸ್, ಎಕ್ಸ್‌ಲೆಂಟ್ ಪಾರ್ಟಿವೇರ್, ಕುರ್ತೀಸ್, ಎಂಬ್ರಾಯಡೆಡ್ ರಯಾನ ಕುರ್ತೀಸ್, ಪ್ರಿಂಟೆಡ್ ಕಾಟನ್ ಲಾಂಗ್–ಶಾರ್ಟ್ ಕುರ್ತೀಸ್ ಇತ್ಯಾದಿ.

ಕೇವಲ ರೂ. 350/- ಮತ್ತು 500/- ಮಾತ್ರ

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್

MRP. ರೂ.1499/- ರಿಂದ 4999/-

ಪ್ಯಾಂಟ್, ಶರ್ಟ್, ಟಿ–ಶರ್ಟ್ ಮತ್ತು ಪುಲ್‌ಓವರ್

ಶರ್ಟ್, ಟಿ–ಶರ್ಟ್ : ಪಾರ್ಟಿವೇರ್, ಬಿಸ್‌ನೆಸ್‌ಕ್ಲಾಸ್, ಆಫೀಸ್‌ವೇರ್, ಫಾರ್ಮಲ್, ಕ್ಯಾಷ್ಯುಯಲ್ ಇತ್ಯಾದಿ.

ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್‌ಸ್ಟ್ರೆಚ್, ಮಸ್‌ರೈಸ್ ಸ್ಟ್ರೆಚ್, ಸ್ಟ್ರೆಚ್ ಚಿನ್ನೂಸ್ ಕಾಟನ್, ಸಾರ್ಟಿನ್ ಸ್ಟ್ರೆಚ್ ಇತ್ಯಾದಿ.

ಕೇವಲ ರೂ. 499/- ರಿಂದ 999/- ಮಾತ್ರ

BIG OFFER 4 Shirts Just Rs. 999/-

MRP Upto Rs. 7999/- Big Brand BLAZER Plan, Checks, Fancy, Etc Just Rs. 999/- Onwards

ಬಿಗ್ ಬ್ರಾಂಡ್ ಕಿಡ್ಸ್ ಮೇಳ

MRP upto Rs.1999/-

ಹುಡಗಿಯರ : ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಫ್ರಾಕ್, ಫ್ಯಾನ್ಸಿ ಡ್ರೆಸ್, ಪುಲೋವರ್, ಜಾಕೆಟ್ ಇತ್ಯಾದಿ

ಹುಡುಗರ : ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ–ಶರ್ಟ್, ಪುಲೋವರ್, ಫ್ಯಾನ್ಸಿ ಡ್ರೆಸ್, ಜಾಕೆಟ್ ಇತ್ಯಾದಿ

ಕೇವಲ ರೂ: 150/- ರಿಂದ 599/- ಮಾತ್ರ

Size 1 Month to 12 Years

ಆಫರ್ 4 ದಿನಗಳು ಮಾತ್ರ 10, 11, 12 ಮತ್ತು 13 ನವೆಂಬರ್ 2021

ಸಮಯ: 10 am to 9 pm NO LUNCH BREAK

ಜಿಲ್ಲಾ ಗುರುಭವನ ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ

ZILLA GURUBHAWAN A V K College Road DAVANGERE

FREE ENTRANCE PARKING

All Major Debit / Credit Cards. Google Pay, PhonePa Accepted

As per Govt. Rules Please Wear Mask & Maintain Scoial Distance


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte